ಅತ್ಯಂತ ಪ್ರಮುಖ ಕರಾರುಗಳು ಮತ್ತು ಷರತ್ತುಗಳು

1. **ಸಾಲ**

ಮಂಜೂರಾದ ಸಾಲದ ಮೊತ್ತ, ಸಾಲದ ಅವಧಿ, ಬಡ್ಡಿ ದರ, ಕಂತುಗಳ ವಿಧ, EMI ಮೊತ್ತ, ಕಂತುಗಳ ಸಂಖ್ಯೆ, ಕಂತುಗಳ ಅಂತಿಮ ದಿನಾಂಕ ಮತ್ತು ಸಾಲದ ಉದ್ದೇಶದ ವಿವರಗಳನ್ನು ಮಂಜೂರಾತಿ ಪತ್ರದ ಹಿಂಭಾಗದ ವಿಭಾಗ(ಗಳಲ್ಲಿ) ಉಲ್ಲೇಖಿಸಲಾಗಿದೆ.

2. **ಶುಲ್ಕಗಳು ಮತ್ತು ಇತರ ಚಾರ್ಜ್‌ಗಳು*:**

ಬಡ್ಡಿ ದರ	ಸಾಲಗಾರ (ರ) ಅಪಾಯದ ವರ್ಗೀಕರಣದ ಆಧಾರದ ಮೇಲೆ 8.50%-22.00%
ಲಾಗಿನ್ ಶುಲ್ಕಗಳು (ಆರಂಭಿಕ ಹಣ ಠೇವಣಿ)	ರೂ. 1,000 ರಿಂದ ರೂ. 5,000 ವರೆಗೆ, ಉತ್ಪನ್ನದ ಪ್ರಕಾರ ಮತ್ತು ಸಾಲದ ಮೊತ್ತವನ್ನು ಅವಲಂಬಿಸಿರುತ್ತದೆ (ಲಾಗಿನ್ ಸಮಯದಲ್ಲಿ ಪಾವತಿಸಬೇಕು). ಲಾಗಿನ್ ಮಾಡಿದ ದಿನಾಂಕದಿಂದ 180 ದಿನಗಳವರೆಗೆ ಲಾಗಿನ್ ಮಾನ್ಯವಾಗಿರುತ್ತದೆ. ಅದರ ನಂತರ, ಸಾಲಗಾರನು ಮತ್ತೆ ಲಾಗಿನ್ ಶುಲ್ಕವನ್ನು ಪಾವತಿಸಬೇಕಾಗುತ್ತದೆ.
ಪ್ರಕ್ರಿಯೆ ಶುಲ್ಕಗಳು	ಮಂಜೂರಾತಿ ಪತ್ರದ ಹಿಂಭಾಗದ ವಿಭಾಗ(ಗಳಲ್ಲಿ) ಉಲ್ಲೇಖಿಸಲಾದಂತೆ
ಪೂರ್ವ-ಪಾವತಿ ಚಾರ್ಜ್‌ಗಳು/ಸ್ವತ್ತು ಮರುಸ್ವಾಧೀನ ಚಾರ್ಜ್‌ಗಳು	**ಫ್ಲೋಟಿಂಗ್ ಬಡ್ಡಿದರದ ಸಾಲಗಳು** ➢ ವೈಯಕ್ತಿಕ ಉದ್ದೇಶಗಳಿಗಾಗಿ (ವ್ಯವಹಾರೇತರ) ವ್ಯಕ್ತಿಗಳಿಗೆ ನೀಡಲಾದ ಎಲ್ಲಾ ಸಾಲಗಳಿಗೆ – ಯಾವುದೇ ಶುಲ್ಕವಿಲ್ಲ ➢ ವ್ಯವಹಾರ ಉದ್ದೇಶಗಳಿಗಾಗಿ ವ್ಯಕ್ತಿಗಳಿಗೆ ಅಥವಾ ಎಂಎಸ್‌ಇ (MSE) ಗಳಿಗೆ ನೀಡಲಾದ ಸಾಲಗಳಿಗೆ (50 ಲಕ್ಷ ರೂಪಾಯಿಗಳವರೆಗೆ ಮಂಜೂರಾದ ಮೊತ್ತಕ್ಕೆ) – ಯಾವುದೇ ಶುಲ್ಕವಿಲ್ಲ ➢ ವ್ಯವಹಾರ ಉದ್ದೇಶಗಳಿಗಾಗಿ ವ್ಯಕ್ತಿಗಳಿಗೆ ಅಥವಾ ಎಂಎಸ್‌ಇ (MSE) ಗಳಿಗೆ ನೀಡಲಾದ ಸಾಲಗಳಿಗೆ (50 ಲಕ್ಷ ರೂಪಾಯಿಗಳಿಗಿಂತ ಹೆಚ್ಚಿನ ಮೊತ್ತಕ್ಕೆ) – • 4% + ಪೂರ್ವಪಾವತಿ ಅಸಲಿಗೆ ಅನ್ವಯವಾಗುವ ತೆರಿಗೆಗಳು, ಸ್ವಂತ ಫಂಡ್ನಿಂದ ಮರುಪಾವತಿಸಿದ್ದರೆ • 6% + ಪೂರ್ವಪಾವತಿ ಅಸಲಿಗೆ ಅನ್ವಯವಾಗುವ ತೆರಿಗೆಗಳು, ಬ್ಯಾಲೆನ್ಸ್ ವರ್ಗಾವಣೆಯ ಮೂಲಕ ಮರುಪಾವತಿಸಿದ್ದರೆ ➢ ಮಧ್ಯಮ ಉದ್ಯಮಗಳಿಗೆ ನೀಡಲಾದ ಎಲ್‌ಎಪಿ (LAP) ಸಾಲಗಳಿಗೆ – • 4% + ಪೂರ್ವಪಾವತಿ ಅಸಲಿಗೆ ಅನ್ವಯವಾಗುವ ತೆರಿಗೆಗಳು, ಸ್ವಂತ ಫಂಡ್ನಿಂದ ಮರುಪಾವತಿಸಿದ್ದರೆ • 6% + ಪೂರ್ವಪಾವತಿ ಅಸಲಿಗೆ ಅನ್ವಯವಾಗುವ ತೆರಿಗೆಗಳು, ಬ್ಯಾಲೆನ್ಸ್ ವರ್ಗಾವಣೆಯ ಮೂಲಕ ಮರುಪಾವತಿಸಿದ್ದರೆ ➢ ಮಧ್ಯಮ ಉದ್ಯಮಗಳಿಗೆ ನೀಡಲಾದ ಮೈಕ್ರೋ

	ಎಲ್ಎಪಿ (Micro LAP) ಸಾಲಗಳಿಗೆ –

	• 4% + ಪೂರ್ವಪಾವತಿ ಅಸಲಿಗೆ ಅನ್ವಯವಾಗುವ ತೆರಿಗೆಗಳು, ಸ್ವಂತ ಫಂಡ್ನಿಂದ ಮರುಪಾವತಿಸಿದ್ದರೆ • 6% + ಪೂರ್ವಪಾವತಿ ಅಸಲಿಗೆ ಅನ್ವಯವಾಗುವ ತೆರಿಗೆಗಳು, ಬ್ಯಾಲೆನ್ಸ್ ವರ್ಗಾವಣೆಯ ಮೂಲಕ ಮರುಪಾವತಿಸಿದ್ದರೆ **ಸ್ಥಿರ ದರದ ಸಾಲಗಳು** ➢ ವೈಯಕ್ತಿಕ ಸಾಲಗಾರರಿಂದ ಗೃಹ ಸಾಲದ ಸಂಪೂರ್ಣ ಮರುಪಾವತಿ - 6% + ಪೂರ್ವಪಾವತಿ ಅಸಲಿಗೆ ಅನ್ವಯವಾಗುವ ತೆರಿಗೆಗಳು, ಬ್ಯಾಲೆನ್ಸ್ ವರ್ಗಾವಣೆಯ ಮೂಲಕ ಮರುಪಾವತಿಸಿದ್ದರೆ; ಸ್ವಂತ ಫಂಡ್ನಿಂದ ಮುಕ್ತಾಯಗೊಳಿಸಿದ್ದರೆ ಶೂನ್ಯ ➢ ಎಲ್‌ಎಪಿ/ಮೈಕ್ರೋ ಎಲ್‌ಎಪಿ ಸಾಲದ ಭಾಗಶಃ ಅಥವಾ ಪೂರ್ಣ ಮರುಪಾವತಿಗಾಗಿ: • 4% + ಪೂರ್ವಪಾವತಿ ಅಸಲಿಗೆ ಅನ್ವಯವಾಗುವ ತೆರಿಗೆಗಳು, ಸ್ವಂತ ಫಂಡ್ನಿಂದ ಮರುಪಾವತಿಸಿದ್ದರೆ • 6% + ಪೂರ್ವಪಾವತಿ ಅಸಲಿಗೆ ಅನ್ವಯವಾಗುವ ತೆರಿಗೆಗಳು, ಬ್ಯಾಲೆನ್ಸ್ ವರ್ಗಾವಣೆಯ ಮೂಲಕ ಮರುಪಾವತಿಸಿದ್ದರೆ ಕಾರ್ಪೊರೇಟ್ಸ್‌ಳು/ಸಾರ್ವಜನಿಕ ಏಜೆನ್ಸಿಗಳು/ಬಿಲ್ಡರ್ಗಳು/ಕಾನೂನು ಘಟಕಗಳಿಂದ ಸಾಲದ ಭಾಗಶಃ ಅಥವಾ ಪೂರ್ಣ ಪೂರ್ವಪಾವತಿ (ಫ್ಲೋಟಿಂಗ್ / ಸ್ಥಿರ ಬಡ್ಡಿದರದ ಮೇಲೆ) - ಮಂಜೂರಾತಿ ಪತ್ರದಲ್ಲಿರುವ ಕರಾರುಗಳ ಪ್ರಕಾರ
ಇನ್ಸ್ಟ್ರುಮೆಂಟ್ ರಿಟರ್ನ್ಸ್ ದಂಡ - ಬಿಲ್ಡರ್ಗಳು /ಕಾರ್ಪೊರೇಟ್ಸ್‌ಳಿಗೆ ನಿರ್ಮಾಣ ಹಣಕಾಸು	1 ನೇ ಬಾರಿ ಮರುಪಾವತಿ ರೂ.5000/- 2ನೇ ಬಾರಿ ಅದಕ್ಕೂ ಮೇಲ್ಪಟ್ಟು ಮರುಪಾವತಿ ರೂ.10000/-
ಇನ್ಸ್ಸ್ಟ್ರುಮೆಂಟ್ ರಿಟರ್ನ್ ಚಾರ್ಜ್ಗಳು	ಪ್ರತಿ ನಿದರ್ಶನಕ್ಕೆ ರೂ.1000/-
ಇಎಂಐ ಪಾವತಿಗಾಗಿ PDC/NACH ಮಂಡೇಟ್ ಫಾರ್ಮ್ ಸಲ್ಲಿಸದಿರುವುದು ಅಥವಾ ನೋಂದಣಿ ಮಾಡಿಸದಿರುವುದಕ್ಕಾಗಿ ವಿಧಿಸಲಾಗುವ ಶುಲ್ಕ, ಪ್ರತಿ ವಹಿವಾಟಿಗೆ.	ಪ್ರತಿ ವಹಿವಾಟಿಗೆ ರೂ.2,000/-
ವಿಳಂಬ ಪಾವತಿ ಬಡ್ಡಿ ಶುಲ್ಕಗಳು	**ವಾರ್ಷಿಕವಾಗಿ 36% (GST ಒಳಗೊಂಡಂತೆ) ಅಂದರೆ. ಕಂತುಗಳ ವಿಳಂಬ ಪಾವತಿಯಾದಾಗ ಪ್ರತಿ ತಿಂಗಳು 3% / ಮೊತ್ತ ಎಲ್ಲಾ ರೀತಿಯ ಸಾಲಗಳಿಗೆ.**
CERSAI ಶುಲ್ಕಗಳು	5 ಲಕ್ಷ ರೂ. ವರೆಗಿನ ಸಾಲಗಳಿಗೆ: ರೂ. 50/- ಮತ್ತು 5 ಲಕ್ಷ ರೂ. ಗಿಂತ ಹೆಚ್ಚಿನ ಸಾಲಗಳಿಗೆ: ರೂ. 100/-
ಸಾಲದ ಅವಧಿಯ ಬದಲಾವಣೆ, EMI, ಸಾಲ	ಪ್ರತಿ ನಿದರ್ಶನಕ್ಕೆ ರೂ.10000/-

ವಿತರಣೆಯ ನಂತರ ಸಹ ಸಾಲಗಾರ (ರ) ಸೇರ್ಪಡೆ / ತೆಗೆದುಹಾಕುವಿಕೆ^	
ನಕಲು ಸ್ಟೇಟ್ಮೆಂಟ್ ನೀಡಿಕೆ ಚಾರ್ಜ್‌ಗಳು	ಪ್ರತಿ ನಿದರ್ಶನಕ್ಕೆ ರೂ.250/-
ಸ್ವಿಚ್ ಚಾರ್ಜ್‌ಗಳು	ಸ್ಥಿರದಿಂದ ಬದಲಾವಣೆ - ಸಾಲದ ಬಾಕಿಯ 4.0% ವರೆಗೆ

	ಬದಲಾವಣೆಯಿಂದ ಸ್ಥಿರ - ಸಾಲ ಬಾಕಿಯ 2.0% ವರೆಗೆ
ಪರಿವರ್ತನೆ ಶುಲ್ಕಗಳು^	ಗೃಹ ಸಾಲಕ್ಕೆ ಸಾಲ ಬಾಕಿಯ 0.25% ಗೃಹೇತರ ಸಾಲಗಳಿಗೆ ಸಾಲ ಬಾಕಿಯ 0.50%
ಹಕ್ಕು ಪತ್ರಗಳ ವಿತರಣಾ ಶುಲ್ಕಗಳ ಫೋಟೋಕಾಪಿ	ಪ್ರತಿ ನಿದರ್ಶನಕ್ಕೆ ರೂ.1000/-
ಹಕ್ಕು ಪತ್ರಗಳ ಹಿಂಪಡೆಯುವಿಕೆ	ಪ್ರತಿ ನಿದರ್ಶನಕ್ಕೆ ರೂ.500/-
ಚೆಕ್/ಇನ್ಸ್ಟ್ರುಮೆಂಟ್ ಸ್ವ್ಯಾಪ್ ಶುಲ್ಕಗಳು	ಪ್ರತಿ ನಿದರ್ಶನಕ್ಕೆ ರೂ.500/-
ಭೋಗ್ಯಪಟ್ಟಿ ವಿತರಣಾ ಶುಲ್ಕಗಳು	ಪ್ರತಿ ನಿದರ್ಶನಕ್ಕೆ ರೂ.250/-
ಸ್ಟೇಟ್ಮೆಂಟ್ ವಿತರಣಾ ಶುಲ್ಕಗಳು	ಪ್ರತಿ ನಿದರ್ಶನಕ್ಕೆ ರೂ.250/-
ನಕಲಿ ಬಡ್ಡಿ ಪ್ರಮಾಣಪತ್ರ (ತಾತ್ಕಾಲಿಕ/ನಿಜವಾದ) ವಿತರಣಾ ಶುಲ್ಕಗಳು	ಪ್ರತಿ ನಿದರ್ಶನಕ್ಕೆ ರೂ.250/-
ನಕಲು NOC ವಿತರಣೆ ಶುಲ್ಕಗಳು	ಪ್ರತಿ ನಿದರ್ಶನಕ್ಕೆ ರೂ.250/-
LOD ವಿತರಣೆ	ಪ್ರತಿ ನಿದರ್ಶನಕ್ಕೆ ರೂ.500/-
ಸ್ವತ್ತುಮರುಸ್ವಾಧೀನ ಪತ್ರದ ವಿತರಣೆ (FCL)	ಪ್ರತಿ ನಿದರ್ಶನಕ್ಕೆ ರೂ.500/-
ಮುಕ್ತಾಯಗೊಂಡ ಖಾತೆಗಳಲ್ಲಿ ಮೂಲ ದಾಖಲೆಗಳ ಹಿಡುವಳಿ ಶುಲ್ಕಗಳು, 30 ದಿನಗಳನ್ನು ಮೀರಿ.	ಪ್ರತಿ ನಿದರ್ಶನಕ್ಕೆ ರೂ.500/-
EMI ಸಂಗ್ರಹಣೆ – ಭೇಟಿ ಚಾರ್ಜ್‌ಗಳು	ಪ್ರತಿ ನಿದರ್ಶನಕ್ಕೆ ರೂ.1000/-
ಅಡಮಾನದ ರಚನೆ/ಬಿಡುಗಡೆ ಶುಲ್ಕಗಳು	ಆಸ್ತಿ ಇರುವ ರಾಜ್ಯದ ಕಾನೂನುಗಳ ಪ್ರಕಾರ / ಅಡಮಾನ ಪತ್ರವನ್ನು ರಚಿಸಲಾಗುತ್ತದೆ.
ಕಾನೂನು/ಮರುಪಾವತಿ/ಪ್ರಾಸಂಗಿಕ ಶುಲ್ಕಗಳು	ವಾಸ್ತವಿಕವಾಗಿ, ಡೀಫಾಲ್ಟ್ ಸಂದರ್ಭದಲ್ಲಿ ಅನ್ವಯಿಸುತ್ತದೆ.
ಅಡಮಾನ ಖಾತರಿ ಶುಲ್ಕ	ಅಡಮಾನ ಖಾತರಿ ಶುಲ್ಕ;ಎಲ್ಲೆಲ್ಲಿ ಅನ್ವಯಿಸುತ್ತದೆಯೋ ಅಲ್ಲಿ; ಸಾಲಗಾರರು ಭರಿಸಬೇಕಾಗುತ್ತದೆ ಮತ್ತು ಅದನ್ನು ಮರುಪಾವತಿಸಲಾಗುವುದಿಲ್ಲ.

***** ಮೇಲೆ ತಿಳಿಸಿದ ಶುಲ್ಕಗಳು ಮತ್ತು ಚಾರ್ಜ್‌ಗಳು, GST, ಶಿಕ್ಷಣ ಸೆಸ್ ಮತ್ತು ಇತರ ಸರ್ಕಾರಿ ತೆರಿಗೆಗಳು, ಲೆವಿಗಳು ಇತ್ಯಾದಿಗಳನ್ನು ಹೊರತುಪಡಿಸಿ (ನಿರ್ದಿಷ್ಟಪಡಿಸದ ಹೊರತು), ಮತ್ತು ಟ್ರುಹೋಮ್ ಫೈನಾನ್ಸ್ ಲಿಮಿಟೆಡ್ ನ ಸ್ವಂತ ವಿವೇಚನೆಯಿಂದ ಬದಲಾವಣೆಗೆ ಒಳಪಟ್ಟಿರುತ್ತದೆ. ಶುಲ್ಕಗಳಲ್ಲಿನ ಯಾವುದೇ ಬದಲಾವಣೆಯನ್ನು ವೆಬ್ಸೈಟ್ನಲ್ಲಿ ಅಪ್ಲೋಡ್ ಮಾಡಲಾಗುತ್ತದೆ ಅಥವಾ ಪತ್ರ/ಇಮೇಲ್/ಎಲೆಕ್ಟ್ರಾನಿಕ್ ಸಂದೇಶದ ಮೂಲಕ ಗ್ರಾಹಕರಿಗೆ ತಿಳಿಸಲಾಗುತ್ತದೆ. ಅಲ್ಲದೆ, ಮೇಲೆ ತಿಳಿಸಲಾದ ಎಲ್ಲಾ ಶುಲ್ಕಗಳು ಮತ್ತು ಚಾರ್ಜ್‌ಗಳನ್ನು ಮರುಪಾವತಿಸಲಾಗುವುದಿಲ್ಲ.**

^ ಟ್ರುಹೋಮ್ ಫೈನಾನ್ಸ್ ಲಿಮಿಟೆಡ್ ನ ವಿವೇಚನೆಯ ಅನುಮೋದನೆ

3. **ಬಡ್ಡಿ ಮರುಹೊಂದಿಕೆ:** ಫ್ಲೋಟಿಂಗ್ ಬಡ್ಡಿದರದ ಸಂದರ್ಭದಲ್ಲಿ, ಕಂಪನಿಯ ಪ್ರೈಮ್ ಲೆಂಡಿಂಗ್ ರೇಟ್ (TruhomePLR) ಪರಿಷ್ಕರಣೆಯಾದಾಗ ಸಾಲದ ಮೇಲಿನ ಬಡ್ಡಿದರವನ್ನು ಮರುಹೊಂದಿಸಲಾಗುತ್ತದೆ/ಪರಿಷ್ಕರಿಸಲಾಗುತ್ತದೆ. TruhomePLR ನಲ್ಲಿನ ಯಾವುದೇ ಪರಿಷ್ಕರಣೆಯನ್ನು ಸಾಲಗಾರರಿಗೆ ಪತ್ರ/ಶಾಖೆಯ ಅಧಿಸೂಚನೆ/ವೆಬ್‌ಸೈಟ್/ಇಮೇಲ್ ಅಥವಾ ಎಲೆಕ್ಟ್ರಾನಿಕ್ ಸಂದೇಶದ ಮೂಲಕ ತಿಳಿಸಲಾಗುತ್ತದೆ. ROI ನಲ್ಲಿನ ಬದಲಾವಣೆಯ ಪರಿಣಾಮವನ್ನು ಮರುಪಾವತಿ ಸಾಮರ್ಥ್ಯವನ್ನು ಅವಲಂಬಿಸಿ ಸಾಲದ ಅವಧಿ ಅಥವಾ EMI ಅಥವಾ ಎರಡಕ್ಕೂ ಸಂಬಂಧಿಸಿದಂತೆ ನೀಡಲಾಗುವುದು. ಸಾಲಗಾರರುಗೆ ಋಣ ಅವಧಿಯ ಯಾವುದೇ ಹಂತದಲ್ಲಿ ಫ್ಲೋಟಿಂಗ್‌ನಿಂದ ಫಿಕ್ಸ್‌ಡ್‌ಗೆ ಬದಲಾಯಿಸುವ ಮತ್ತು ಭಾಗಶಃ ಅಥವಾ ಸಂಪೂರ್ಣ ಮುಂಗಡ ಪಾವತಿ ಮಾಡುವ ಆಯ್ಕೆಯು ಲಭ್ಯವಿರುತ್ತದೆ.

4. ದರ ಮರುಹೊಂದಿಸುವಿಕೆಯ ವಿವಿಧ ಪರಿಣಾಮಗಳು ಈ ಕೆಳಕಂಡಂತೆ ಇವೆ:
   a. EMI ಸ್ಥಿರತೆಯೊಂದಿಗೆ ಅವಧಿಯಲ್ಲಿ ಪರಿಷ್ಕರಣೆ
   b. ಅವಧಿ ಸ್ಥಿರತೆಯೊಂದಿಗೆ EMI ನಲ್ಲಿ ಪರಿಷ್ಕರಣೆ
   c. ಅವಧಿ ಮತ್ತು EMI ನಲ್ಲಿ ಪರಿಷ್ಕರಣೆ

   ದರ ಬದಲಾವಣೆಯ ಪ್ರಭಾವವನ್ನು ವಿವರವಾಗಿ ತಿಳಿದುಕೊಳ್ಳಲು, ನೀವು ನಮ್ಮ ವೆಬ್ಸೈಟ್ ಅನ್ನು ಉಲ್ಲೇಖಿಸಬಹುದು.

5. **ಸಾಲಾವಧಿ ವಿಸ್ತರಣೆ/ಸಬ್ಸಿಡಿ:** : ಸರ್ಕಾರದ ಯೋಜನೆ/ನಿಯಂತ್ರಕ ನಿಬಂಧನೆಯ ಅಡಿಯಲ್ಲಿ ನೀಡಲಾಗುವ ಯಾವುದೇ ಸಬ್ಸಿಡಿ/ಸಾಲಾವಧಿ ವಿಸ್ತರಣೆಯಂತಹ ಯೋಜನೆಗಳು ಕರಾರುಗಳು ಮತ್ತು ಷರತ್ತುಗಳಿಗೆ ಒಳಪಟ್ಟಿರುತ್ತದೆ. ಇದರ ಹೊರತಾಗಿ, ಕಂಪನಿಯು ವೈಯಕ್ತಿಕ ಸಾಲಗಾರರಿಗೆ ಯಾವುದೇ ಸಾಲಾವಧಿ ವಿಸ್ತರಣೆ ಅಥವಾ ಸಬ್ಸಿಡಿಯನ್ನು ಒದಗಿಸುವುದಿಲ್ಲ.

6. **ಸಾಲಕ್ಕೆ ಭದ್ರತೆ:**

   ಟ್ರುಹೋಮ್ ಫೈನಾನ್ಸ್ ಲಿಮಿಟೆಡ್ ಪರವಾಗಿ ಕೆಳಗೆ ನಮೂದಿಸಿದ ಆಸ್ತಿಯ ಅಡಮಾನ.
   ಆಸ್ತಿಯ ವಿಳಾಸ :
   ಖಾತರಿ :
   ಇತರ ಭದ್ರತೆ :

   ಭದ್ರತೆ ಎಂದರೆ ಅಡಮಾನ, ಖಾತರಿ ಮತ್ತು ಸಾಲವನ್ನು ಭದ್ರಗೊಳಿಸಲು ಟ್ರುಹೋಮ್ ಫೈನಾನ್ಸ್ ಲಿಮಿಟೆಡ್ ನಿಂದ ಸೂಕ್ತವೆಂದು ಪರಿಗಣಿಸಲಾದ ಯಾವುದೇ ರೀತಿಯ ಭದ್ರತೆಯನ್ನು ಒಳಗೊಂಡಿರುತ್ತದೆ ಮತ್ತು ಸಾಲಗಾರರು ಅದಕ್ಕೆ ಅನುಗುಣವಾಗಿ ಪಾವತಿಸಬೇಕಾಗುತ್ತದೆ. ಸಾಲಗಾರರು ರಾಜ್ಯಗಳ ಕಾನೂನುಗಳ ಪ್ರಕಾರ IGR ನೊಂದಿಗೆ ಶೀರ್ಷಿಕೆ ದಾಖಲೆಗಳ ಠೇವಣಿ ಜ್ಞಾಪಕ ಪತ್ರ/ನೋಂದಣಿಯನ್ನು ನೋಂದಾಯಿಸುವ ಅಗತ್ಯವಿದೆ. ಟ್ರುಹೋಮ್ ಫೈನಾನ್ಸ್ ಲಿಮಿಟೆಡ್ ತನ್ನ ಶುಲ್ಕವನ್ನು CERSAI ನ ದಾಖಲೆಗಳಲ್ಲಿ ನೋಂದಾಯಿಸುತ್ತದೆ.

7. **ಆಸ್ತಿ/ಸಾಲಗಾರರ ವಿಮೆ:**

   ಆಸ್ತಿಯ ವಿಮೆ: ಗ್ರಾಹಕರು ಆಸ್ತಿ ವಿಮೆಯನ್ನು ಪಡೆಯುವುದು ಕಡ್ಡಾಯವಾಗಿದೆ, ಎಲ್ಲಾ ನಷ್ಟಗಳು, ಬೆಂಕಿ, ಗಲಭೆಗಳು ಮತ್ತು ಭೂಕಂಪ, ಪ್ರವಾಹ ಮುಂತಾದ ಇತರ ನೈಸರ್ಗಿಕ ವಿಕೋಪಗಳಿಂದ ಉಂಟಾಗುವ **ಹಾನಿಗಳಂತಹ ಅನಿರೀಕ್ಷಿತ ಅಪಾಯಗಳ** ವಿರುದ್ಧ ಖರೀದಿಸುವ / ನಿರ್ಮಿಸುವ ಆಸ್ತಿಯನ್ನು ಸಂಪೂರ್ಣವಾಗಿ ವಿಮೆ ಮಾಡುವುದು. ಮತ್ತು ಗೃಹಸಾಲ/ಹೆಚ್ಚುವರಿ ಹಣಕಾಸಿಗೆ ಯಾವುದೇ ವಿಮೆ ಮಾಡಬಹುದಾದ ಅಪಾಯದ ವಿರುದ್ಧ ಟ್ರುಹೋಮ್ ಫೈನಾನ್ಸ್ ಲಿಮಿಟೆಡ್ ಗೆ ಅಗತ್ಯವಿದ್ದರೆ. ಸಾಲಗಾರರಿಂದ ಪಡೆದ ಅಂತಹ ವಿಮಾ ಪಾಲಿಸಿಯನ್ನು ಟ್ರುಹೋಮ್ ಫೈನಾನ್ಸ್ ಲಿಮಿಟೆಡ್ ಪರವಾಗಿ ನಿಯೋಜಿಸಲಾಗುತ್ತದೆ.

8. **ಜೀವ ವಿಮೆ:** ಸಾಲಗಾರರು ಸಾಲದ ಮೊತ್ತಕ್ಕೆ ತಕ್ಕಂತೆ ಜೀವ ವಿಮಾ ರಕ್ಷಣೆಯನ್ನು ಪಡೆಯುವ ಆಯ್ಕೆಯನ್ನು ಹೊಂದಿರುತ್ತಾರೆ. ವಿಮಾದಾರರ ವಯಸ್ಸು ಮತ್ತು ಆರೋಗ್ಯ, ಅವಧಿ ಮತ್ತು ಇತರ ಪಾಲಿಸಿ ನಿಯತಾಂಕಗಳನ್ನು ಅವಲಂಬಿಸಿ ಪ್ರೀಮಿಯಂ ಮೊತ್ತವು ಬದಲಾಗುತ್ತದೆ.

9. **ಆರೋಗ್ಯ ವಿಮೆ:**

ಸಾಲಗಾರರಿಗೆ ಆರೋಗ್ಯ ವಿಮೆಯನ್ನು ಪಡೆಯುವ ಆಯ್ಕೆ ಇದೆ. ವಿಮಾದಾರರ ವಯಸ್ಸನ್ನು ಅವಲಂಬಿಸಿ ಪ್ರೀಮಿಯಂ ಮೊತ್ತವು ಬದಲಾಗುತ್ತದೆ ಮತ್ತು ಇದು ಟ್ರುಹೋಮ್ ಫೈನಾನ್ಸ್ ಲಿಮಿಟೆಡ್ ನ ಗ್ರಾಹಕರು ಈ ಯೋಜನೆಯಡಿಯಲ್ಲಿ ನೋಂದಣಿಗೆ ಅರ್ಹರಾಗಿರುವ ವೈಶಿಷ್ಟ್ಯದಲ್ಲಿ ಐಚ್ಛಿಕ ಆಯ್ಕೆಯಾಗಿದೆ.

10. **ಸಾಲ ವಿತರಣೆಗಾಗಿ ಷರತ್ತುಗಳು:**

ಸಾಲದ ವಿತರಣೆಯು ಮಂಜೂರಾತಿ ಪತ್ರ, ಕಾನೂನು ಅಭಿಪ್ರಾಯ ವರದಿ, ತಾಂತ್ರಿಕ ಪರಿಶೀಲನಾ ವರದಿ, ಭದ್ರತೆಯ ರಚನೆ, ಟ್ರುಹೋಮ್ ಫೈನಾನ್ಸ್ ಲಿಮಿಟೆಡ್ ನಿಂದ ಧನಸಹಾಯ ಮಾಡಬೇಕಾದ ಆಸ್ತಿಯ ಅಗತ್ಯ ಶಾಸನಬದ್ಧ ಅನುಮೋದನೆಗಳನ್ನು ಒಳಗೊಂಡಂತೆ ಎಲ್ಲಾ ಕರಾರುಗಳು ಮತ್ತು ಷರತ್ತುಗಳ ತೃಪ್ತಿದಾಯಕ ಅನುಸರಣೆಗೆ ಒಳಪಟ್ಟಿರುತ್ತದೆ. ಮತ್ತು ಮನೆಗಳ ನಿರ್ಮಾಣದ ಸಂದರ್ಭದಲ್ಲಿ, ವಿತರಣೆಯು ಅದರ ನಿರ್ಮಾಣದ ಹಂತವನ್ನು ಅವಲಂಬಿಸಿರುತ್ತದೆ. ಸಾಲಗಾರರು ತಮ್ಮ ಉದ್ಯೋಗ/ಸಂಪರ್ಕ ವಿವರದಲ್ಲಿ ಯಾವುದೇ ಬದಲಾವಣೆಯಿದ್ದರೆ ಅದನ್ನು ಟ್ರುಹೋಮ್ ಫೈನಾನ್ಸ್ ಲಿಮಿಟೆಡ್ ಗೆ ತಿಳಿಸಬೇಕು.

ವಿತರಣಾ ವಿಧಾನ ಮತ್ತು ವಿಧಾನ ಪ್ರಕಾರವು ಟ್ರುಹೋಮ್ ಫೈನಾನ್ಸ್ ಲಿಮಿಟೆಡ್ ನ ಸ್ವಂತ ವಿವೇಚನೆಗೆ ಬಿಡಲಾಗಿದೆ. ಟ್ರುಹೋಮ್ ಫೈನಾನ್ಸ್ ಲಿಮಿಟೆಡ್ ನಿಂದ ಸಾಲದ ಅಥವಾ ಅದರ ಯಾವುದೇ ಭಾಗವನ್ನು ಸಾಲಗಾರರಿಗೆ ಅಥವಾ ನೇರವಾಗಿ ಡೆವಲಪರ್/ಬಿಲ್ಡರ್/ಕನ್ಸ್ಟ್ರಕ್ಷನ್ ಕಂಪನಿ/ಗುತ್ತಿಗೆದಾರ/ಮಾರಾಟಗಾರರಿಗೆ, ಅನ್ವಯಿಸುವ ಅಥವಾ ಟ್ರುಹೋಮ್ ಫೈನಾನ್ಸ್ ಲಿಮಿಟೆಡ್ ಇನ್ಯಾವುದೇ ಸಂಬಂಧಪಟ್ಟ ವ್ಯಕ್ತಿಗೆ ನೀಡಬಹುದಾಗಿದ್ದು ಇದು ಅದರ ಸ್ವಂತ ವಿವೇಚನೆಗೆ ಸಂಬಂಧಪಟ್ಟಿರುತ್ತದೆ. ಸಾಲಗಾರ ಪಡೆದ ಸಾಲವು ಮತ್ತೊಂದು ಬ್ಯಾಂಕ್/ಹಣಕಾಸು ಸಂಸ್ಥೆಯಿಂದ ಹಿಂದೆ ಪಡೆದ ಗೃಹ ಸಾಲದ ಬದಲಿ/ಸ್ವಿಚ್ ಆಗಿದ್ದರೆ, ಟ್ರುಹೋಮ್ ಫೈನಾನ್ಸ್ ಲಿಮಿಟೆಡ್ ನಿಂದ ಸಾಲದ ಮೊತ್ತ ಅಥವಾ ಅದರ ಯಾವುದೇ ಭಾಗವನ್ನು ಸಾಲಗಾರರಿಗೆ ಅಥವಾ ನೇರವಾಗಿ ಅಂತಹ ಇತರ ಬ್ಯಾಂಕ್/ಹಣಕಾಸು ಸಂಸ್ಥೆಗೆ ಅಂದರೆ ಟ್ರುಹೋಮ್ ಫೈನಾನ್ಸ್ ಲಿಮಿಟೆಡ್ ತನ್ನ ಸ್ವಂತ ವಿವೇಚನೆಯಿಂದ ಸೂಕ್ತವೆಂದು ಪರಿಗಣಿಸಿದಂತೆ ಅದನ್ನು ವಿತರಿಸಬಹುದು.

11. **ಬಡ್ಡಿ ದರ/EMI ಮತ್ತು ಇತರ ಶುಲ್ಕಗಳಲ್ಲಿನ ಬದಲಾವಣೆಗಳ ಮಾಹಿತಿಗಾಗಿ ನ್ಯಾಯಯುತ ಅಭ್ಯಾಸಗಳ ಸಂಹಿತೆ ಮತ್ತು ಕಾರ್ಯವಿಧಾನ:**

ನ್ಯಾಯಯುತ ಅಭ್ಯಾಸಗಳ ಸಂಹಿತೆಯಲ್ಲಿನ ವಿಷಯಗಳನ್ನು ಸಾಲಗಾರರಿಗೆ ಅರ್ಥವಾಗುವ ಭಾಷೆಯಲ್ಲಿ ಟ್ರುಹೋಮ್ ಫೈನಾನ್ಸ್ ಲಿಮಿಟೆಡ್ ಅಧಿಕಾರಿ ವಿವರಿಸಿದರು ಮತ್ತು ವಿನಂತಿಯ ಮೇರೆಗೆ ಸಂಹಿತೆಯ ಪ್ರತಿಯನ್ನು ಸಾಲಗಾರರಿಗೆ ಒದಗಿಸಲಾಯಿತು. ಸಂಹಿತೆಯನ್ನು ಟ್ರುಹೋಮ್ ಫೈನಾನ್ಸ್ ಲಿಮಿಟೆಡ್ ನ ವೆಬ್ಸೈಟ್ನಲ್ಲಿ ಮತ್ತು ಕಂಪನಿಯ ಪ್ರತಿಯೊಂದು ಶಾಖೆಯಲ್ಲಿಯೂ ಸಹ ಲಭ್ಯವಿರುತ್ತವೆ. ಮುಂದೆ, ನ್ಯಾಯಯುತ ಅಭ್ಯಾಸಗಳ ಸಂಹಿತೆಯ ಪ್ರಕಾರ, ಬಡ್ಡಿ ದರ ಮತ್ತು ಇತರ ಶುಲ್ಕಗಳನ್ನು ನಿಯತಕಾಲಿಕವಾಗಿ ಪರಿಶೀಲಿಸಲಾಗುತ್ತದೆ. ಬಡ್ಡಿ ದರ/EMIನಲ್ಲಿ ಯಾವುದೇ ಬದಲಾವಣೆಯ ಸಂದರ್ಭದಲ್ಲಿ, ಟ್ರುಹೋಮ್ ಫೈನಾನ್ಸ್ ಲಿಮಿಟೆಡ್ ಅದನ್ನು ವೆಬ್ಸೈಟ್/ಪತ್ರ/ಇಮೇಲ್/ಎಲೆಕ್ಟ್ರಾನಿಕ್ ಸಂದೇಶದಲ್ಲಿ ಅಪ್ಡೇಟ್ ಮಾಡುವ ಮೂಲಕ ಅಥವಾ ಅಸ್ತಿತ್ವದಲ್ಲಿರುವ ಮಾರ್ಗಸೂಚಿಗಳ ಅಡಿಯಲ್ಲಿ ಸ್ವೀಕಾರಾರ್ಹವಾದ ಯಾವುದೇ ರೀತಿಯ ಸಂವಹನದ ಮೂಲಕ, ನಮ್ಮ ದಾಖಲೆಗಳಲ್ಲಿ ನವೀಕರಿಸಲಾದ ಕೊನೆಯ ಸಂಪರ್ಕ ವಿವರಗಳ ಮೂಲಕ ಸಾಲಗಾರರಿಗೆ ತಿಳಿಸಲಾಗುತ್ತದೆ. ಬಡ್ಡಿದರಗಳು ಮತ್ತು ಶುಲ್ಕಗಳಲ್ಲಿ ಅಂತಹ ಬದಲಾವಣೆಗಳು, ಯಾವುದಾದರೂ ಇದ್ದರೆ, ನಿರೀಕ್ಷಿತ ಆಧಾರದ ಮೇಲೆ ಪರಿಣಾಮಕಾರಿಯಾಗುತ್ತವೆ. ಇದಲ್ಲದೆ, ಅಂತಹ ಬದಲಾವಣೆಯು ಗ್ರಾಹಕರಿಗೆ ಅನಾನುಕೂಲವೆನಿಸಿದರೆ, ಅವನು/ಅವಳು 60 ದಿನಗಳಲ್ಲಿ ಮತ್ತು ಯಾವುದೇ ಸೂಚನೆಯಿಲ್ಲದೆ ತಮ್ಮ ಖಾತೆಯನ್ನು ಮುಚ್ಚಬಹುದು ಅಥವಾ ಯಾವುದೇ ಹೆಚ್ಚುವರಿ ಶುಲ್ಕಗಳು ಅಥವಾ ಬಡ್ಡಿಯನ್ನು ಪಾವತಿಸದೆಯೇ ಬದಲಾಯಿಸಬಹುದು.

12. **ಬಾಕಿ ಮೊತ್ತದ ಮರುಪಡೆಯುವಿಕೆಯ ಕಾರ್ಯವಿಧಾನ:**

ಟ್ರುಹೋಮ್ ಫೈನಾನ್ಸ್ ಲಿಮಿಟೆಡ್ ಗೆ ಯಾವುದೇ ನಿಗದಿತ ಬಾಕಿಗಳನ್ನು ಪಾವತಿಸದಿದ್ದಲ್ಲಿ, ಉದಾ. EMI ಗಳು, ಪೂರ್ವ-EMI ಗಳು, ಇತ್ಯಾದಿ. ಸಾಲಗಾರರು SMS (ಟ್ರುಹೋಮ್ ಫೈನಾನ್ಸ್ ಲಿಮಿಟೆಡ್ ನೊಂದಿಗೆ ನೋಂದಾಯಿಸಲಾದ ಮೊಬೈಲ್ ಸಂಖ್ಯೆ) ಮತ್ತು/ಅಥವಾ ದೂರವಾಣಿ ಕರೆ ಮತ್ತು/ಅಥವಾ ಪತ್ರದ ಮೂಲಕ ಮಾಹಿತಿಯನ್ನು ಸ್ವೀಕರಿಸುತ್ತಾರೆ. ಅಂತಹ ಪಾವತಿಸದ ಬಾಕಿಗಳನ್ನು ಮೂಲತಃ ನಿಗದಿಪಡಿಸಿದ ದಿನಾಂಕದ 7 ದಿನಗಳ ಒಳಗೆ ಪಾವತಿಸಬೇಕಾಗುತ್ತದೆ, ಜೊತೆಗೆ ಎಲ್ಲಾ ವಿಳಂಬ ದಂಡನೀಯ ಮತ್ತು ಬೌನ್ಸ್ ಶುಲ್ಕಗಳು, ವಿಭಾಗದ "ಶುಲ್ಕಗಳು ಮತ್ತು ಇತರ ಶುಲ್ಕಗಳ" ಅಡಿಯಲ್ಲಿ ಪಟ್ಟಿ ಮಾಡಲಾಗಿರುತ್ತದೆ.

ಇಂತಹ ಬಾಕಿಗಳನ್ನು, ಪೂರ್ಣವಾಗಿ ಅಥವಾ ಭಾಗಶಃ, 7 ದಿನಗಳ ನಂತರವೂ ಪಾವತಿಸದೆ ಉಳಿದಿದ್ದರೆ, ಟ್ರುಹೋಮ್ ಫೈನಾನ್ಸ್ ಲಿಮಿಟೆಡ್ ತನ್ನ ಸ್ವಂತ ವಿವೇಚನೆಯಿಂದ ಅದರ ಮರುಪಡೆಯುವಿಕೆಗೆ ಕಾನೂನು ಕ್ರಮವನ್ನು ಪ್ರಾರಂಭಿಸುತ್ತದೆ.

ಯಾವುದೇ ಗ್ರಾಹಕರ ಖಾತೆಗೆ ಸಂಬಂಧಿಸಿದ ಕ್ರೆಡಿಟ್ ಮಾಹಿತಿಯನ್ನು ಕ್ರೆಡಿಟ್ ಮಾಹಿತಿ ಬ್ಯೂರೋ (ಇಂಡಿಯಾ) ಲಿಮಿಟೆಡ್ (ಸಿಬಿಲ್) ಅಥವಾ ಯಾವುದೇ ಇತರ ಪರವಾನಗಿ ಪಡೆದ ಬ್ಯೂರೋಗಳಿಗೆ ಹದಿನೈದು ದಿನಗಳಿಗೊಮ್ಮೆ ಒದಗಿಸಲಾಗುತ್ತದೆ. CIBIL ನೊಂದಿಗೆ ಕ್ರೆಡಿಟ್ ಇತಿಹಾಸದ ಮೇಲೆ ಯಾವುದೇ ವ್ಯತಿರಿಕ್ತ ಪರಿಣಾಮವನ್ನು ತಪ್ಪಿಸಲು, ಗ್ರಾಹಕರು ಸಾಲದ ಮೊತ್ತದ ಮೇಲಿನ ಯಾವುದೇ ಪಾವತಿಯ ಸಕಾಲಿಕ ಪಾವತಿಯನ್ನು ಖಚಿತಪಡಿಸಿಕೊಳ್ಳಬೇಕು ಎಂದು ಸಲಹೆ ನೀಡಲಾಗುತ್ತದೆ.

ಅಡಮಾನ/ಭದ್ರತೆಗಳ ಮರುಪಾವತಿ ಪ್ರಕ್ರಿಯೆ, ಸೇರಿದಂತೆ ಆದರೆ ಇದಕ್ಕೆ ಮಾತ್ರ ಸೀಮಿತವಾಗಿರದೆ, ಅಡಮಾನಗೊಳಿಸಿದ ಆಸ್ತಿಯನ್ನು ಸ್ವಾಧೀನಪಡಿಸಿಕೊಳ್ಳುವುದು ಮತ್ತು ಮಾರಾಟ ಮಾಡುವುದು ಮತ್ತು ಹಣಕಾಸು ಸ್ವತ್ತುಗಳ ಸೆಕ್ಯುರಿಟೈಸೇಶನ್ ಮತ್ತು ಪುನರ್ನಿರ್ಮಾಣ ಮತ್ತು ಭದ್ರತಾ ಹಿತಾಸಕ್ತಿ ಕಾಯ್ದೆ, 2002 (SARFAESI ಕಾಯಿದೆ) ಜಾರಿ ಅಡಿಯಲ್ಲಿ ಸೂಚಿಸಲಾದ ಕಾರ್ಯವಿಧಾನಕ್ಕೆ ಅನುಗುಣವಾಗಿ. ಅಥವಾ ಯಾವುದೇ ಇತರ ಕಾನೂನಿನ ಅಡಿಯಲ್ಲಿ, ಆಯಾ ಕಾನೂನಿನ ಅಡಿಯಲ್ಲಿ ನಿಗದಿಪಡಿಸಿದ ನಿರ್ದೇಶನಗಳ ಪ್ರಕಾರ ಸಂಪೂರ್ಣವಾಗಿ ಅನುಸರಿಸಲಾಗುತ್ತದೆ. ನೆಗೋಷಿಯೇಬಲ್ ಇನ್ಸ್ಟ್ರುಮೆಂಟ್ಸ್ ಕಾಯಿದೆ, ಸಿವಿಲ್ ಮೊಕದ್ದಮೆ ಮತ್ತು SARFAESI ಕಾಯಿದೆಯ ಅಡಿಯಲ್ಲಿ ವಿಳಂಬ ಮರುಪಾವತಿಗಾಗಿ ಕ್ರಮಗಳನ್ನು ಪ್ರಾರಂಭಿಸುವ ಮೊದಲು ಗ್ರಾಹಕರಿಗೆ ಸೂಚನೆ/ಜ್ಞಾಪನೆಗಳು/ನೋಟೀಸ್(ಗಳು)ಅನ್ನು ನೀಡಲಾಗುತ್ತದೆ.

13. ನಿರ್ದಿಷ್ಟಪಡಿಸಿದ ಸಾಲಗಳಿಗೆ, ಈ ಕೆಳಗಿನ ಸನ್ನಿವೇಶಗಳಲ್ಲಿ, ನಿರೀಕ್ಷಿತವಾಗಿ, ಕ್ರೆಡಿಟ್ ಮೌಲ್ಯಮಾಪನ ವಿಧಾನದ ಆಧಾರದ ಮೇಲೆ ಸಾಲಗಳ ಬಡ್ಡಿ ದರವನ್ನು ಬದಲಾಯಿಸಬಹುದು. ಮೇಲಿನ ಪ್ಯಾರಾ 10 ರಲ್ಲಿ ಹೇಳಿದಂತೆ ಬದಲಾವಣೆಗೆ ಸಂಬಂಧಿಸಿದಂತೆ ಗ್ರಾಹಕರಿಗೆ ಸಂವಹನವನ್ನು ಮಾಡಬೇಕು.
   a) ಆಗಾಗ ಬೌನ್ಸ್ ಅಥವಾ ಸಾಲ ಮರುಪಾವತಿಯಲ್ಲಿ ವಿಳಂಬ
   b) ಟ್ರುಹೋಮ್ ಫೈನಾನ್ಸ್ ಲಿಮಿಟೆಡ್ ನೊಂದಿಗಿನ ಮತ್ತೊಂದು ಸಾಲದಲ್ಲಿ ಕ್ರೆಡಿಟ್ ಕಡಿಮೆಗೊಳ್ಳುವಿಕೆ
   c) ಯಾವುದೇ ಇತರ ಸಾಲದಾತರಿಂದ ಕ್ರೆಡಿಟ್ ಕಡಿಮೆಗೊಳ್ಳುವಿಕೆಯ ವರದಿ
   d) ಬ್ಯೂರೋ ಸ್ಕೋರ್‌ನಲ್ಲಿ ಕಡಿಮೆಗೊಳ್ಳುವಿಕೆ
   e) RBI, NHB ಇತ್ಯಾದಿಗಳ ಋಣಾತ್ಮಕ ಪಟ್ಟಿ/ಡೀಫಾಲ್ಟರ್ ಪಟ್ಟಿಯಲ್ಲಿ ಕಾಣಿಸಿಕೊಳ್ಳುವ ಹೆಸರು
   f) ಟ್ರುಹೋಮ್ ಫೈನಾನ್ಸ್ ಲಿಮಿಟೆಡ್ ಗೆ ಸಲ್ಲಿಸಿದ ಯಾವುದೇ ದಾಖಲೆಗಳಲ್ಲಿ ದೋಷಗಳು ಅಥವಾ ವ್ಯತ್ಯಾಸಗಳು ಕಂಡುಬರುವುದು
   g) ಟ್ರುಹೋಮ್ ಫೈನಾನ್ಸ್ ಲಿಮಿಟೆಡ್ ನಿಂದ ಸಾಲಗಾರ/ರ ಆಂತರಿಕ ವಿಶ್ಲೇಷಣಾತ್ಮಕ ಮೌಲ್ಯಮಾಪನದ ಆಧಾರದ ಮೇಲೆ ಗ್ರಾಹಕರ ಅಪಾಯದ ಪ್ರೊಫೈಲ್‌ನಲ್ಲಿ ಕಡಿಮೆಗೊಳ್ಳುವಿಕೆ

14. **ವಾರ್ಷಿಕ ಬಾಕಿಯಿರುವ ಮೊತ್ತದ ಸ್ಟೇಟ್ಮೆಂಟ್ ನೀಡಲಾಗುವ ದಿನಾಂಕ:**
ಗ್ರಾಹಕರ ವಿನಂತಿಯನ್ನು ಆಧರಿಸಿ, ವಾರ್ಷಿಕ ಬಾಕಿ ಉಳಿದಿರುವ ಬ್ಯಾಲೆನ್ಸ್ ಸ್ಟೇಟ್ಮೆಂಟ್ ಅನ್ನು ಏಪ್ರಿಲ್ 30 ರ ನಂತರ ನೀಡಲಾಗುತ್ತದೆ, ಕಳೆದ ಹಣಕಾಸು ವರ್ಷಕ್ಕೆ ಗ್ರಾಹಕರಿಂದ ವಿನಂತಿಸಿದ ದಿನಾಂಕದಿಂದ 15 ಕಾರ್ಯಾವಧಿ ದಿನಗಳಲ್ಲಿ, ಸುಂಕದ ಪಟ್ಟಿಯ ಪ್ರಕಾರ ಶುಲ್ಕ ಪಾವತಿಗೆ ಒಳಪಟ್ಟಿರುತ್ತದೆ.

15. **ಗ್ರಾಹಕ ಸೇವೆ:**
   a) ಕಚೇರಿಗೆ ಭೇಟಿ ನೀಡುವ ಸಮಯ: ಎಲ್ಲಾ ಕಾರ್ಯಾವಧಿ ದಿನಗಳಲ್ಲಿ (ಸೋಮವಾರದಿಂದ ಶನಿವಾರದವರೆಗೆ) 10.30 AM ನಿಂದ 4.00 PM. 2 ನೇ ಶನಿವಾರ ಮತ್ತು ಸಾರ್ವಜನಿಕ ರಜಾದಿನಗಳಲ್ಲಿ ಮುಚ್ಚಲಾಗಿದೆ.

   b) ಇತರ ಯಾವುದೇ ಪ್ರಶ್ನೆಗಳಿದ್ದರೆ, ನಮ್ಮ ಟೋಲ್ ಫ್ರೀ ಸಂಖ್ಯೆ 1800-102-4345 ಗೆ ಕರೆ ಮಾಡಬಹುದು.

c) **ಸಾಲ ಖಾತೆ ಸ್ಟೇಟ್ಮೆಂಟ್, ಶೀರ್ಷಿಕೆ ದಾಖಲೆಗಳ ಫೋಟೊಕಾಪಿ, ಸಾಲದ ಮುಕ್ತಾಯ/ವರ್ಗಾವಣೆಯಲ್ಲಿ ಮೂಲ ದಾಖಲೆಗಳನ್ನು ಹಿಂದಿರುಗಿಸುವ ವಿಧಾನ:** - ಮೇಲೆ ತಿಳಿಸಿದ ಯಾವುದೇ ದಾಖಲೆಯನ್ನು ಪಡೆಯಲು ಸಾಲಗಾರರು ಲಿಖಿತ ಮನವಿ ಪತ್ರ / ಅರ್ಜಿಯನ್ನು ಡಿಮ್ಯಾಂಡ್ ಡ್ರಾಫ್ಟ್ / ಪೇ ಆರ್ಡರ್ / ಚೆಕ್ ಅನ್ನು ಮೇಲಿನ ಶುಲ್ಕಗಳ ಪಟ್ಟಿಯಲ್ಲಿ ನಮೂದಿಸಿರುವ ಮೊತ್ತದೊಂದಿಗೆ ಟ್ರುಹೋಮ್ ಫೈನಾನ್ಸ್ ಲಿಮಿಟೆಡ್ ಹೆಸರಿಗೆ ಸಲ್ಲಿಸಲು ಮತ್ತು ಅದನ್ನು ಹತ್ತಿರದ ಟ್ರುಹೋಮ್ ಫೈನಾನ್ಸ್ ಲಿಮಿಟೆಡ್ ಶಾಖೆಗೆ ಸಲ್ಲಿಸಲು ವಿನಂತಿಸಲಾಗಿದೆ.

d) ಸ್ವತ್ತುಮರುಸ್ವಾಧೀನ ಪತ್ರವನ್ನು ವಿನಂತಿಯನ್ನು ಸ್ವೀಕರಿಸಿದ ಮತ್ತು (FCL) ವಿತರಣಾ ಶುಲ್ಕಗಳನ್ನು ಪಾವತಿಸಿದ ನಂತರದ 21 ದಿನಗಳಲ್ಲಿ ನೀಡಲಾಗುತ್ತದೆ

e) ಟ್ರುಹೋಮ್ ಫೈನಾನ್ಸ್ ಲಿಮಿಟೆಡ್ ಸಾಲದ ಖಾತೆಯಲ್ಲಿ ಸ್ವೀಕರಿಸಿದ ಪೂರ್ಣ ಸ್ವತ್ತುಮರುಸ್ವಾಧೀನ ಮೊತ್ತದ ದಿನಾಂಕದಿಂದ 30 ದಿನಗಳ ಒಳಗೆ ಮೂಲ ದಾಖಲೆಗಳನ್ನು ಹಿಂದಿರುಗಿಸುತ್ತದೆ. ಸಾಲದ ಖಾತೆಯನ್ನು ಮುಚ್ಚಿದಾಗ, ನೀವು ಪೂರ್ಣ ಮತ್ತು ಅಂತಿಮ ಪಾವತಿಯ ಸ್ವೀಕೃತಿಯ ಮೇಲೆ 30 ದಿನದೊಳಗೆ ಟ್ರುಹೋಮ್ ಫೈನಾನ್ಸ್ ಲಿಮಿಟೆಡ್ ದಾಖಲೆಗಳನ್ನು ಸಂಗ್ರಹಿಸಬಹುದು, ನೀವು ಟ್ರುಹೋಮ್ ಫೈನಾನ್ಸ್ ಲಿಮಿಟೆಡ್ ನ ಯಾವುದೇ ಇತರ ಸಕ್ರಿಯ ಶಾಖೆಯಿಂದ ಮೇಲಾಧಾರ ದಾಖಲೆಗಳನ್ನು ಸಂಗ್ರಹಿಸಲು ಬಯಸಿದರೆ (ಸಕ್ರಿಯ ಶಾಖೆಗಳ ಪಟ್ಟಿ ನಮ್ಮ ವೆಬ್ಸೈಟ್ನಲ್ಲಿ ಲಭ್ಯವಿದೆ) ದಯವಿಟ್ಟು ತವರು ಶಾಖೆಗೆ ಮುಂಚಿತವಾಗಿ ತಿಳಿಸಿ ಅಥವಾ contact@truhomefinance.in ಗೆ ವಿನಂತಿಯನ್ನು ಕಳುಹಿಸಿ.

16. **ಕುಂದುಕೊರತೆಯ ಪರಿಹಾರ ಕಾರ್ಯವಿಧಾನ:**

ಟ್ರುಹೋಮ್ ಫೈನಾನ್ಸ್ ಲಿಮಿಟೆಡ್ ನ ಸೇವೆಗಳಿಂದ ಅಥವಾ ಅದರ DSA/ಮರುಪಾವತಿ ಏಜೆಂಟ್ಗಳ ಮೂಲಕ ನೀವು ತೃಪ್ತರಾಗದಿರುವ ಅಪರೂಪದ ಸಂದರ್ಭದಲ್ಲಿ, ಕೆಳಗೆ ನೀಡಿರುವಂತೆ ಗ್ರಿಡ್ ಅನ್ನು ಅನುಸರಿಸುವ ಮೂಲಕ ನಿಮ್ಮ ಕುಂದುಕೊರತೆಗಳು ಅಥವಾ ಪ್ರಶ್ನೆಗಳನ್ನು ಸಲ್ಲಿಸಲು ನೀವು ಆದ್ಯತೆ ನೀಡಬಹುದು:

ವೆಬ್ಸೈಟ್ನಲ್ಲಿ ಶಾಖೆ/ಟೋಲ್ ಫ್ರೀ ಸಂಖ್ಯೆ/ಇಮೇಲ್/ಮೊಬೈಲ್ ಅಪ್ಲಿಕೇಶನ್/ಗ್ರಾಹಕ ವಿಭಾಗ: ದೂರುದಾರರು ತಮ್ಮ ದೂರನ್ನು ನೋಂದಾಯಿಸಲು ಶಾಖೆಗೆ ಭೇಟಿ ನೀಡಬಹುದು ಅಥವಾ 1800-102-4345 ಗೆ ಕರೆ ಮಾಡಬಹುದು. ದೂರನ್ನು contact@truhomefinance.in ಗೆ ಇಮೇಲ್ ಮಾಡಬಹುದು ಅಥವಾ ಪ್ಲೇ ಸ್ಟೋರ್ನಿಂದ ಡೌನ್ಲೋಡ್ ಮಾಡಬಹುದಾದ ಟ್ರುಹೋಮ್ ಫೈನಾನ್ಸ್ ಲಿಮಿಟೆಡ್ ಮೊಬೈಲ್ ಆ್ಯಪ್ ಮೂಲಕವೂ ಕಳುಹಿಸಬಹುದು.

ಎಸ್ಕಲೇಷನ್ ಮ್ಯಾಟ್ರಿಕ್ಸ್:

a) **ಎಸ್ಕಲೇಷನ್ 1:** ಕಂಪನಿಯ ಗ್ರಾಹಕ ಸೇವೆ ಅಥವಾ ಮೇಲಿನ ಚಾನಲ್ಗಳ ಪ್ರತಿಕ್ರಿಯೆಯಿಂದ ನೀವು ತೃಪ್ತರಾಗದಿದ್ದರೆ, ನೀವು ಈ ಕೆಳಗಿನ ವಿಳಾಸದಲ್ಲಿ ಮುಖ್ಯ ಗ್ರಾಹಕ ಸೇವೆಗೆ ತಿಳಿಸಬಹುದು (ದಯವಿಟ್ಟು ವಿಷಯದ ಸಾಲಿನಲ್ಲಿ ನಿಮ್ಮ ಸಾಲದ ಖಾತೆ ಸಂಖ್ಯೆ ಮತ್ತು ಸಂಪರ್ಕ ಸಂಖ್ಯೆಯನ್ನು ನಮೂದಿಸಿ):

ಮುಖ್ಯಸ್ಥರು – ಗ್ರಾಹಕ ಸೇವೆ

- ಇಮೇಲ್: escalation@truhomefinance.in
- ದೂರವಾಣಿ ಸಂಖ್ಯೆ.: (022) 268118742
- ವಿಳಾಸ: ಟ್ರುಹೋಮ್ ಫೈನಾನ್ಸ್ ಲಿಮಿಟೆಡ್, 3ನೇ ಮಹಡಿ, ಸಿ-ವಿಂಗ್, ಫಾರ್ಚೂನ್ 2000, ಸಿ-2, G-ಬ್ಲಾಕ್, ಬಾಂದ್ರಾ ಕುರ್ಲಾ ಕಾಂಪ್ಲೆಕ್ಸ್, ಮುಂಬೈ - 400051

b) **ಎಸ್ಕಲೇಷನ್ 2:** ಈಗಲೂ ನೀವು ತೃಪ್ತರಾಗದಿದ್ದರೆ, ನೀವು ಈ ಕೆಳಗಿನ ವಿಳಾಸದಲ್ಲಿ ಕುಂದುಕೊರತೆ ನಿವಾರಣಾ ಅಧಿಕಾರಿಗೆ ದೂರು ಸಲ್ಲಿಸಬಹುದು (ದಯವಿಟ್ಟು ವಿಷಯ ಸಾಲಿನಲ್ಲಿ ನಿಮ್ಮ ಸಾಲದ ಖಾತೆ ಸಂಖ್ಯೆ ಮತ್ತು

ಸಂಪರ್ಕ ಸಂಖ್ಯೆಯನ್ನು ನಮೂದಿಸಿ):

ಕುಂದುಕೊರತೆ ನಿವಾರಣಾ ಅಧಿಕಾರಿ

- ಶ್ರೀಮತಿ ಲೀನಾ ಜೋಶಿ
- ಇಮೇಲ್ ಐಡಿ:leena.joshi@truhomefinance.in
- ದೂರವಾಣಿ ಸಂಖ್ಯೆ: (022) 42410473
- ವಿಳಾಸ: ಟ್ರುಹೋಮ್ ಫೈನಾನ್ಸ್ ಲಿಮಿಟೆಡ್, ಹಂತ 3, ವೊಕಾರ್ಡ್ ಟವರ್ಸ್, ಈಸ್ಟ್ ವಿಂಗ್ ಬಾಂದ್ರಾ ಕುರ್ಲಾ ಕಾಂಪ್ಲೆಕ್ಸ್, ಮುಂಬೈ - 400051 | ದೂರವಾಣಿ - (022) 42410400 | ಫ್ಯಾಕ್ಸ್ - (022) 42410422 |

ಮೇಲಿನ ದೂರಿನ ಎಸ್ಕಲೇಷನ್ ಮ್ಯಾಟ್ರಿಕ್ಸ್ನ ಪ್ರತಿ ಹಂತದಲ್ಲಿ, ಕಂಪನಿಯು ಎಸ್ಕಲೇಷನ್ ಅನ್ನು ಸ್ವೀಕರಿಸಿದ **7 (ಏಳು) ಕಾರ್ಯಾವಧಿ ದಿನಗಳಲ್ಲಿ ಪ್ರತಿಕ್ರಿಯೆಯನ್ನು** ಕಳುಹಿಸಲು ಪ್ರಯತ್ನಿಸುತ್ತದೆ.

c) ರಾಷ್ಟ್ರೀಯ ಹೌಸಿಂಗ್ ಬ್ಯಾಂಕ್ (NHB) ಗೆ ದೂರಿನ ಎಸ್ಕಲೇಷನ್:
ಮೊದಲ ದೂರನ್ನು ನೀಡಿದ ಒಂದು **ತಿಂಗಳೊಳಗೆ** ಗ್ರಾಹಕರು ಕಂಪನಿಯಿಂದ ಪ್ರತಿಕ್ರಿಯೆಯನ್ನು ಸ್ವೀಕರಿಸದಿದ್ದರೆ ಅಥವಾ ಸ್ವೀಕರಿಸಿದ ಪ್ರತಿಕ್ರಿಯೆಯಿಂದ ಅತೃಪ್ತರಾಗಿದ್ದರೆ, ಗ್ರಾಹಕರು ಈ ಕೆಳಗಿನ ಸಂವಹನ ವಿಧಾನಗಳ ಮೂಲಕ NHB ಯ ದೂರು ಪರಿಹಾರ ಕೇಂದ್ರವನ್ನು ಸಂಪರ್ಕಿಸಬಹುದು:

ಆನ್ಲೈನ್ ವಿಧಾನ - ದೂರುದಾರರು ದೂರನ್ನು ನೋಂದಾಯಿಸಲು ಕೆಳಗಿನ ಲಿಂಕ್ ಅನ್ನು ಕ್ಲಿಕ್ ಮಾಡಬಹುದು : https://grids.nhbonline.org.in

ಆಫ್‌ಲೈನ್ ವಿಧಾನ - ಅಂಚೆ ಮೂಲಕ ದೂರು ಸಲ್ಲಿಸಲು, ಗ್ರಾಹಕರು https://nhb.org.in/en/grievance-redressalofficer/ ಲಿಂಕ್‌ನಲ್ಲಿ ನೀಡಲಾದ ನಿಗದಿತ ನಮೂನೆಯಲ್ಲಿ ಈ ಕೆಳಗಿನ ವಿಳಾಸಕ್ಕೆ ಬರೆಯಬಹುದು:

ರಾಷ್ಟ್ರೀಯ ವಸತಿ ಬ್ಯಾಂಕ್ (ದೂರು ಪರಿಹಾರ ಕೋಶ):
ನ್ಯಾಷನಲ್ ಹೌಸಿಂಗ್ ಬ್ಯಾಂಕ್ (NHB), 4ನೇ ಮಹಡಿ, ಕೋರ್ 5-ಎ, ಇಂಡಿಯಾ ಹ್ಯಾಬಿಟಾಟ್ ಸೆಂಟರ್, ಲೋಧಿ ರೋಡ್, ನವದೆಹಲಿ - 110 003.

ಸಾಲದ ವಿವರವಾದ ಕರಾರುಗಳು ಮತ್ತು ಷರತ್ತುಗಳಿಗಾಗಿ, ಇಲ್ಲಿ ಕಕ್ಷಿಗಳು ಸಾಲ ಮತ್ತು ಇತರ ಭದ್ರತಾ ದಾಖಲೆಗಳನ್ನು ಅವರು ಕಾರ್ಯಗತಗೊಳಿಸಿದ/ಕಾರ್ಯಗತಗೊಳಿಸಬೇಕಾದ ದಾಖಲೆಗಳನ್ನು ಉಲ್ಲೇಖಿಸುತ್ತಾರೆ ಮತ್ತು ಅವಲಂಬಿಸುತ್ತಾರೆ ಎಂದು ಈ ಮೂಲಕ ಒಪ್ಪಿಕೊಳ್ಳಲಾಗಿದೆ.
ಮೇಲಿನ ಕರಾರುಗಳು ಮತ್ತು ಷರತ್ತುಗಳನ್ನು ಸಾಲಗಾರರಾದ /ರಾದ ಶ್ರೀ /ಶ್ರೀಮತಿ /ಕುಮಾರಿ. ______________________________ ಓದಿದ್ದಾರೆ /ಅರ್ಥಮಾಡಿಕೊಂಡಿದ್ದಾರೆ.

ಸ್ವೀಕರಿಸಲಾಗಿದೆ

(ಸಾಲಗಾರ/ರ ಸಹಿ ಅಥವಾ ಹೆಬ್ಬೆರಳಿನ ಗುರುತು)

ದಿನಾಂಕ:

ಟ್ರುಹೋಮ್ ಫೈನಾನ್ಸ್ ಲಿಮಿಟೆಡ್ ನ ಅಧಿಕಾರಿಗಳ ಸಹಿ
ದಿನಾಂಕ:

Truhome FINANCE
Formerly
Shriram Housing Finance

ನೀವು ಸಂಕಲಿಸಬೇಕಾದ ಹೆಚ್ಚುವರಿ ಕರಾರುಗಳು ಮತ್ತು ಷರತ್ತುಗಳು ಈ ಕೆಳಗಿನಂತಿವೆ:

1. ಚೆಕ್ ಬೌನ್ಸ್/ರಿಟರ್ನ್ ಮತ್ತು ವಿಳಂಬ/ತಡವಾದ ಪಾವತಿಗೆ ಅಥವಾ ಇನ್ಯಾವುದೇ ಇನ್ನೊಂದು ದಂಡವನ್ನು ಒಳಗೊಂಡಂತೆ ಆದರೆ ಇಷ್ಟಕ್ಕೇ ಸೀಮಿತವಾಗಿರದೆ ಸೂಕ್ತವಾದ ಶುಲ್ಕಗಳನ್ನು ವಿಧಿಸಲು ಟ್ರುಹೋಮ್ ಫೈನಾನ್ಸ್ ಲಿಮಿಟೆಡ್ ಸಂಪೂರ್ಣ ಹಕ್ಕನ್ನು ಹೊಂದಿರುತ್ತದೆ ಎಂದು ಸಾಲಗಾ(ರ(ರು)ಈ ಮೂಲಕ ಸಮ್ಮತಿಸುತ್ತಾರೆ ಮತ್ತು ದೃಢೀಕರಿಸುತ್ತಾರೆ. ಅಂತಹ ಲೆವಿಯ ಸಂದರ್ಭದಲ್ಲಿ, ಸಾಲಗಾ(ರ(ರು ಹೇಳಲಾದ ಮೊತ್ತವನ್ನು ಯಾವುದೇ ಮುಜುಗರ ಅಥವಾ ಪ್ರತಿಭಟನೆಯಿಲ್ಲದೆ ತಕ್ಷಣವೇ ಪಾವತಿಸಬೇಕು ಮತ್ತು ಅಂತಹ ಲೆವಿಗೆ ಆಕ್ಷೇಪಿಸುವುದಿಲ್ಲ ಅಥವಾ ಮನ್ನಾವನ್ನು ಕ್ಲೈಮ್ ಮಾಡುವುದಿಲ್ಲ ಅಥವಾ ಅದು ತಮ್ಮ ಗಮನಕ್ಕೆ ಬಂದಿಲ್ಲ ಎಂದು ಕ್ಲೈಮ್ ಮಾಡುವುದಿಲ್ಲ ಅಥವಾ ಸಮರ್ಥಿಸಿಕೊಳ್ಳುವುದಿಲ್ಲ ಎಂದು ಸಾಲಗಾ)ರ)ರು ಸಮ್ಮತಿಸುತ್ತಾರೆ. ಟ್ರುಹೋಮ್ ಫೈನಾನ್ಸ್ ಲಿಮಿಟೆಡ್ ಮುಂಗಡವಾಗಿ ಅಥವಾ ನಂತರ ಹೇಳಲಾದ ಲೆವಿ ಮತ್ತು/ಅಥವಾ ಲೆವಿಯಲ್ಲಿ ಬದಲಾವಣೆ ಅಥವಾ ಅಂತಹ ಲೆವಿಯನ್ನು ಪರಿಚಯಿಸುವುದರ ಬಗ್ಗೆ ತಿಳಿಸುವುದು ಕಡ್ಡಾಯವಲ್ಲ ಎಂಬ ಅಂಶವನ್ನು ಸಾಲಗಾ(ರ(ರು) ತಿಳಿದಿರುತ್ತಾರೆ. ಅದರ ವಿವರಗಳನ್ನು ಟ್ರುಹೋಮ್ ಫೈನಾನ್ಸ್ ಲಿಮಿಟೆಡ್ ನಲ್ಲಿ ವಿಚಾರಿಸುವುದು ಅಥವಾ ಪಡೆದುಕೊಳ್ಳುವುದಕ್ಕೆ ಸಾಲಗಾರ(ರು) ಜವಾಬ್ದಾರರಾಗಿರುತ್ತಾರೆ.
2. ನೀವು PDC ಗಳು, ಭದ್ರತಾ PDC ಗಳು (SPDC ಗಳು) ಮತ್ತು NACH ಮ್ಯಾಂಡೇಟ್‌ಗಳನ್ನು ಒದಗಿಸುವುದು ಅಗತ್ಯವಾಗಿದೆ
3. ಸಾಲವನ್ನು ಮಂಜೂರು ಮಾಡಲಾದ ಉದ್ದೇಶಕ್ಕಾಗಿ ಮಾತ್ರ ಬಳಸಬೇಕು.
4. ಕಾನೂನು ಅಭಿಪ್ರಾಯ ವರದಿಯಲ್ಲಿ ಒದಗಿಸಲಾದ ಎಲ್ಲಾ ಕರಾರುಗಳು ಮತ್ತು ಷರತ್ತುಗಳ ತೃಪ್ತಿದಾಯಕ ಅನುಸರಣೆಗೆ ಸಾಲ ಒಳಪಟ್ಟಿರುತ್ತದೆ, ಅದರ ಶೀರ್ಷಿಕೆಯು ಟ್ರುಹೋಮ್ ಫೈನಾನ್ಸ್ ಲಿಮಿಟೆಡ್ ಅನುಮೋದಿತ ವಕೀಲರಿಂದ ಮುಕ್ತವಾಗಿರಬೇಕು ಮತ್ತು ಮಾರುಕಟ್ಟೆಗೆ ಅರ್ಹವಾಗಿರಬೇಕು.
5. ಸಾಲದ ಮೊತ್ತವು ಟ್ರುಹೋಮ್ ಫೈನಾನ್ಸ್ ಲಿಮಿಟೆಡ್ ಅನುಮೋದಿತ ಮೌಲ್ಯಮಾಪಕರಿಂದ ತೃಪ್ತಿದಾಯಕ ಮೌಲ್ಯಮಾಪನ ವರದಿಯನ್ನು ಆಧರಿಸಿರುತ್ತದೆ.
6. ಸಾಲಗಾರರು ಅಗತ್ಯವಿರುವ ಒಪ್ಪಂದಗಳು, ದಾಖಲೆಗಳು ಮತ್ತು ಬರಹಗಳನ್ನು ಕಾರ್ಯಗತಗೊಳಿಸುವವರೆಗೆ ಮತ್ತು ಟ್ರುಹೋಮ್ ಫೈನಾನ್ಸ್ ಲಿಮಿಟೆಡ್ ಗೆ ಅಗತ್ಯವಿರುವ ಇತರ ಕಾರ್ಯಗಳು ಹಾಗೂ ಕೃತಿಗಳು ಮತ್ತು ಭದ್ರತೆಯನ್ನು ರಚಿಸುವವರೆಗೆ, ಆಸ್ತಿ ಸಾಲಕ್ಕೆ ಸಂಬಂಧಿಸಿದ ಸಾಲದ ಸೌಲಭ್ಯದ ಅಡಿಯಲ್ಲಿ ಯಾವುದೇ ಮೊತ್ತವನ್ನು ವಿತರಿಸಲಾಗುವುದಿಲ್ಲ.
7. ಟ್ರುಹೋಮ್ ಫೈನಾನ್ಸ್ ಲಿಮಿಟೆಡ್ ನಿರ್ಧಾರಕ್ಕೆ ಅನುಗುಣವಾಗಿ ಸಾಲವನ್ನು ಒಂದೇ ಬಾರಿಗೆ ಅಥವಾ ಕಂತುಗಳಲ್ಲಿ ವಿತರಿಸಲಾಗುತ್ತದೆ.
8. ಮುಕ್ತಾಯದ ಸಮಯದಲ್ಲಿ ಸಾಲದಲ್ಲಿರುವ ಎಲ್ಲಾ ಆಸ್ತಿ ಮಾಲೀಕರು ಒಟ್ಟಾಗಿ ಶೀರ್ಷಿಕೆ ಪತ್ರಗಳನ್ನು ಸಂಗ್ರಹಿಸಬೇಕು.
9. EMI ಗೆ ಅನ್ವಯವಾಗುವ ದರವನ್ನು ಪೂರ್ವ-EMI ಬಡ್ಡಿಯನ್ನು ಪಾವತಿಸುವ ದಿನಾಂಕದಿಂದ EMI ಪ್ರಾರಂಭವಾಗುವ ದಿನಾಂಕದವರೆಗೆ ವಿಧಿಸಲಾಗುತ್ತದೆ.
10. ಮಂಜೂರಾತಿ ಪತ್ರದಲ್ಲಿ ಉಲ್ಲೇಖಿಸಲಾದ ಬಡ್ಡಿದರವು ಟ್ರೂಹೋಮ್ ಫೈನಾನ್ಸ್‌ನ ಪ್ರೈಮ್ ಲೆಂಡಿಂಗ್ ರೇಟ್ (TruhomePLR) ನಲ್ಲಿನ ಬದಲಾವಣೆಗಳಿಗೆ ಅನುಗುಣವಾಗಿ ಮಾರ್ಪಾಡಿಗೆ ಒಳಪಟ್ಟಿರುತ್ತದೆ. ಸಾಲದ ಸೌಲಭ್ಯಕ್ಕೆ ಅನ್ವಯವಾಗುವ ಬಡ್ಡಿದರವು, ಸಾಲ ವಿತರಣೆಯ ದಿನಾಂಕದಂದು ಚಾಲ್ತಿಯಲ್ಲಿರುವ ದರವಾಗಿರಬೇಕು ಮತ್ತು ಸಾಲದ ಒಪ್ಪಂದದ ಅನುಸೂಚಿಯಲ್ಲಿ ನಮೂದಿಸಿರುವಂತಿರಬೇಕು.
11. ಬ್ರಾಂಚ್ ಅಥವಾ ವೆಬ್‌ಸೈಟ್‌ನಲ್ಲಿ TruhomePLR ಬದಲಾವಣೆಯನ್ನು ಪ್ರದರ್ಶಿಸಿದಾಗ ಅಥವಾ ಸೂಚಿಸಿದಾಗ, ಸಾಲಗಾರರಿಗೆ ಆ ಬದಲಾವಣೆಯ ಅರಿವಿದೆ ಎಂದು ಭಾವಿಸಲಾಗುತ್ತದೆ.
12. ಗ್ರಾಹಕರು ಆಸ್ತಿ ವಿಮೆಯನ್ನು ಪಡೆಯುವುದು ಕಡ್ಡಾಯ ಎಂಬುದನ್ನು ದಯವಿಟ್ಟು ಗಮನಿಸಿ. ನೀವು ಖರೀದಿಸಬೇಕಾದ/ನಿರ್ಮಿಸಲು ಬಯಸುವ ಆಸ್ತಿಯನ್ನು ಬೆಂಕಿ, ಗಲಭೆಗಳು ಮತ್ತು ಭೂಕಂಪ, ಪ್ರವಾಹದಂತಹ ಇತರ ಅಪಾಯಗಳಿಂದ ಉಂಟಾಗಬಹುದಾದ ಎಲ್ಲಾ ನಷ್ಟಗಳು, ಹಾನಿಗಳಿಗೆ ಸಂಬಂಧಿಸಿದಂತೆ ಮತ್ತು ಟ್ರುಹೋಮ್ ಫೈನಾನ್ಸ್ ಲಿಮಿಟೆಡ್ ಗೆ ಅಗತ್ಯವಿದ್ದರೆ ಆಸ್ತಿಯ ಮೇಲಿನ ಸಾಲ - ವಾಣಿಜ್ಯ / ವಾಣಿಜ್ಯ ಆಸ್ತಿ ಖರೀದಿಗೆ ಸಾಲ / ಹೆಚ್ಚುವರಿ ಹಣಕಾಸಿನೊಂದಿಗೆ ಅಸ್ತಿತ್ವದಲ್ಲಿರುವ ಸಾಲವನ್ನು ಸ್ವಾಧೀನಪಡಿಸಿಕೊಳ್ಳಲು ಯಾವುದೇ ಇತರ ವಿಮೆ ಮಾಡಬಹುದಾದ ಅಪಾಯಕ್ಕೆ ಸಂಬಂಧಿಸಿದಂತೆ ಸಂಪೂರ್ಣವಾಗಿ ವಿಮೆ ಮಾಡಿಸಬೇಕಾಗುತ್ತದೆ.

Formerly Shriram Housing Finance

ಸಾಲಗಾರರು ಪಡೆದ ಅಂತಹ ವಿಮಾ ಪಾಲಿಸಿಯನ್ನು ಟ್ರುಹೋಮ್ ಫೈನಾನ್ಸ್ ಲಿಮಿಟೆಡ್ ಪರವಾಗಿ ನಿಯೋಜಿಸಲಾಗುತ್ತದೆ.

13. ಸಾಲಗಾರರು ಟ್ರುಹೋಮ್ ಫೈನಾನ್ಸ್ ಲಿಮಿಟೆಡ್ ಗೆ ಸಾಲದ ಮೊತ್ತದ ಅಂತಿಮ ವಿತರಣೆಯ 15 ದಿನಗಳ ಒಳಗೆ ವಿಮಾ ಪಾಲಿಸಿಯನ್ನು ಸಲ್ಲಿಸಬೇಕು. ಸಾಲಗಾರ ಅಂತಹ ವಿಮಾ ಪಾಲಿಸಿಯನ್ನು 15 ದಿನಗಳ ಒಳಗೆ ಟ್ರುಹೋಮ್ ಫೈನಾನ್ಸ್ ಲಿಮಿಟೆಡ್ ಗೆ ಒದಗಿಸಲು/ಸಲ್ಲಿಸಲು ವಿಫಲವಾದರೆ, ವಿಮಾ ಪ್ರೀಮಿಯಂ ಮೊತ್ತಕ್ಕೆ ಸಾಲಗಾರರ ಸಾಲದ ಖಾತೆಯನ್ನು ಡೆಬಿಟ್ ಮಾಡುವ ಹಕ್ಕನ್ನು ಟ್ರುಹೋಮ್ ಫೈನಾನ್ಸ್ ಲಿಮಿಟೆಡ್ ಕಾಯ್ದಿರಿಸುತ್ತದೆ ಮತ್ತು ಟ್ರುಹೋಮ್ ಫೈನಾನ್ಸ್ ಲಿಮಿಟೆಡ್ ಪರವಾಗಿ ನಿಯೋಜಿಸಲಾದ ವಿಮಾ ಪಾಲಿಸಿಯನ್ನು ಪಡೆದುಕೊಳ್ಳುತ್ತದೆ.

14. ಕ್ರೆಡಿಟ್ ಶೀಲ್ಡ್ ಅನ್ನು ಪಡೆದಿರುವ ಸಾಲಗಾರರು, ವಿಮಾ ಕಂಪನಿಯು ನಿಗದಿಪಡಿಸಿದ ಗ್ರಿಡ್ ಅಡಿಯಲ್ಲಿ ಬಂದರೆ ವೈದ್ಯಕೀಯ ಚಿಕಿತ್ಸೆಗೆ ಒಳಗಾಗಬೇಕಾಗುತ್ತದೆ. ವೈದ್ಯಕೀಯ ಪ್ರಕರಣಗಳ ನಿರ್ಧಾರವು ವಿಮಾ ಕಂಪನಿಯ ಅಂಡರ್ರೈಟಿಂಗ್ನ ಮೇಲೆ ಸಂಪೂರ್ಣವಾಗಿ ಅವಲಂಬಿತವಾಗಿದೆ ಮತ್ತು ಜೀವ ವಿಮಾ ಕಂಪನಿಯು ಹಂಚಿಕೊಂಡ ನಿರ್ಧಾರದ ಯಾವುದೇ ಅಂಶಕ್ಕೆ ಟ್ರುಹೋಮ್ ಫೈನಾನ್ಸ್ ಲಿಮಿಟೆಡ್ ಜವಾಬ್ದಾರರಾಗಿರುವುದಿಲ್ಲ. ವಿಮಾದಾರರು (ಟ್ರುಹೋಮ್ ಫೈನಾನ್ಸ್ ಲಿಮಿಟೆಡ್ ನ ವಿವೇಚನೆಯಿಂದ) ವೈದ್ಯಕೀಯ ಪರೀಕ್ಷೆಗಳಿಗೆ ಒಳಗಾಗಿದ್ದರೆ ಮತ್ತು ವಿಮಾ ಕಂಪನಿಯು ತಿಳಿಸುವ ಅಂಡರ್ರೈಟಿಂಗ್ ನಿರ್ಧಾರದ ಸ್ವೀಕೃತಿಯನ್ನು ಒದಗಿಸಿದರೆ ಮಾತ್ರ ಅಂತಹ ಸಂದರ್ಭಗಳಲ್ಲಿ ಸಾಲದ ಮೇಲಿನ ಕವರ್ ಪ್ರಾರಂಭವಾಗುತ್ತದೆ. ಸಾಲ ವಿತರಣೆಯ ಮೊದಲು ಈ ಎಲ್ಲಾ ಅಗತ್ಯ ಕಾರ್ಯವಿಧಾನಗಳನ್ನು ಪೂರ್ಣಗೊಳಿಸಬೇಕು. ಸಾಲದ ವಿತರಣೆಯ 45 ದಿನಗಳೊಳಗೆ ವಿಮಾ ಪ್ರಕ್ರಿಯೆಯ ಯಾವುದೇ ಅಂಶದ ಕುರಿತು ಸಾಲಗಾರರು ಯಾವುದೇ ಪ್ರತಿಕ್ರಿಯೆ ನೀಡದಿದ್ದರೆ, ಪ್ರೀಮಿಯಂ ಮೊತ್ತವನ್ನು ಸಾಲಕ್ಕೆ ಹೊಂದಿಸಲು ಟ್ರುಹೋಮ್ ಫೈನಾನ್ಸ್ ಲಿಮಿಟೆಡ್ ಸಂಪೂರ್ಣ ಹಕ್ಕುಗಳನ್ನು ಹೊಂದಿರುತ್ತದೆ ಮತ್ತು ಸಾಲವು ಬಿಡುಗಡೆಯಾಗುವುದಿಲ್ಲ.
15. ನೀವು ಅಥವಾ ನಿಮ್ಮ ಸಹ-ಸಾಲಗಾರರು ಅಥವಾ ಜಾಮೀನುದಾರದ ಸಂವಹನ ವಿಳಾಸ ಬದಲಾವಣೆ, ಉದ್ಯೋಗ, ವೃತ್ತಿಯಲ್ಲಿ ಯಾವುದೇ ಬದಲಾವಣೆಯ ಸಂದರ್ಭದಲ್ಲಿ, ಅದಕ್ಕೆ ಸಂಬಂಧಿಸಿದ ಮಾಹಿತಿಯನ್ನು ತಕ್ಷಣವೇ ಟ್ರುಹೋಮ್ ಫೈನಾನ್ಸ್ ಲಿಮಿಟೆಡ್ ಗೆ ನೀಡಬೇಕು.
16. ಆಸ್ತಿಯನ್ನು ಎಲ್ಲಾ ಸಮಯದಲ್ಲೂ ಕಾಪಾಡಬೇಕು ಮತ್ತು ಸಾಲದ ತೀರ್ಮಾನವಾಗಿಲ್ಲದೇ ಇರುವಾಗ ಪ್ರಾಕೃತಿಕ ವಿಕೋಪಗಳು ಅಥವಾ ಗಲಭೆಗಳು ಇತ್ಯಾದಿಗಳ ಕಾರಣದಿಂದಾಗಿ ಆಸ್ತಿಯ ಯಾವುದೇ ನಷ್ಟ ಉಂಟಾದರೆ, ಅದನ್ನು ತಪ್ಪದೆ ಟ್ರುಹೋಮ್ ಫೈನಾನ್ಸ್ ಲಿಮಿಟೆಡ್ ಗೆ ತಿಳಿಸಬೇಕು.
17. ಆಸ್ತಿ ನಿಮ್ಮ ಹೆಸರಿಗೆ ವರ್ಗಾವಣೆಗೊಂಡಿದೆ ಮತ್ತು ಅಗತ್ಯ ತೆರಿಗೆ ಮೌಲ್ಯಮಾಪನವನ್ನು ಪೂರ್ಣಗೊಳಿಸಲಾಗಿದೆ ಎನ್ನುವುದನ್ನು ನೀವು ಖಚಿತಪಡಿಸಿಕೊಳ್ಳಬೇಕು. ಆಸ್ತಿಗೆ ಸಂಬಂಧಿಸಿದ ಎಲ್ಲಾ ತೆರಿಗೆಗಳನ್ನು ತಕ್ಷಣವೇ ಪಾವತಿಸಬೇಕು.
18. ಸಾಲ ಒಪ್ಪಂದದ ಷರತ್ತಿನ ಪ್ರಕಾರ, ಸಾಲ ಪಾವತಿಯ ಕಂತುಗಳು, ಬಡ್ಡಿಗಳು, ವೆಚ್ಚಗಳು ಇತ್ಯಾದಿಗಳನ್ನು ನೀವು ಡೀಫಾಲ್ಟ್ ಮಾಡಿದ ಸಂದರ್ಭದಲ್ಲಿ ನಿಮಗೆ ಯಾವುದೇ ಸೂಚನೆ ನೀಡದೆಯೇ ಸಾಲವನ್ನು ತಕ್ಷಣವೇ ಹಿಂಪಡೆಯಲಾಗುತ್ತದೆ. ಮೊತ್ತವನ್ನು ಮರುಪಾವತಿಸಲು ನಿಮ್ಮನ್ನು ವಿನಂತಿಸಿದಾಗ ನೀವು ಬಡ್ಡಿಗಳು, ವೆಚ್ಚಗಳು ಮತ್ತು ಶುಲ್ಕಗಳು ಇತ್ಯಾದಿಗಳೊಂದಿಗೆ ಸಂಪೂರ್ಣ ಮೊತ್ತವನ್ನು ಮರುಪಾವತಿಸಬೇಕು, ವಿಫಲವಾದರೆ, ನಿಮ್ಮಿಂದ ಮತ್ತು ಜಾಮೀನುದಾರರಿಂದ ಅದರ ಬಾಕಿಗಳನ್ನು ಮರುಪಡೆಯಲು ಕಾನೂನಿನ ಮೊರೆಹೋಗುವ ಹಕ್ಕನ್ನು ಟ್ರುಹೋಮ್ ಫೈನಾನ್ಸ್ ಲಿಮಿಟೆಡ್ ಕಾಯ್ದಿರಿಸಿಕೊಂಡಿದೆ. ಸಾಲದ ಒಪ್ಪಂದದ ಅಡಿಯಲ್ಲಿ ವ್ಯಾಖ್ಯಾನಿಸಿದಂತೆ ಯಾವುದೇ 'ಈವೆಂಟ್ ಎಫ್ ಡಿಫಾಲ್ಟ್' ವಾರ್ಷಿಕ **36%** (GST ಒಳಗೊಂಡಂತೆ) ದರದಲ್ಲಿ ಅವಧಿ ದಂಡಗೆ ಶುಲ್ಕಗಳನ್ನು ವಿಧಿಸಲಾಗುತ್ತದೆ.

19. ಮರುಪಾವತಿ ವಿವರಪಟ್ಟಿಯ ಪ್ರಕಾರ ಸಾಲದ ಪೂರ್ಣ ಬಾಕಿಗಳನ್ನು ಪಾವತಿಸದಿದ್ದಲ್ಲಿ, ಕೆಳಗೆ ಕೊಟ್ಟಿರುವ ಸಚಿತ್ರ ವಿವರಣೆಯ ಪ್ರಕಾರ, ವರ್ಗೀಕರಣ ದಿನಾಂಕದಂದು ಹೇಳಲಾದ ಖಾತೆಯನ್ನು SMA (ವಿಶೇಷ ಉಲ್ಲೇಖ ಖಾತೆ)/ NPA (ಅನುತ್ಪಾದಿತ ಸ್ವತ್ತು) ಎಂದು ವರ್ಗೀಕರಿಸಲಾಗುತ್ತದೆ -

    ಉದಾಹರಣೆ: ಸಾಲದ ಖಾತೆಯ ಅಂತಿಮ ದಿನಾಂಕವು ಮಾರ್ಚ್ 7,2024 ಆಗಿದ್ದರೆ ಮತ್ತು ಸಾಲ ನೀಡಿದ ಸಂಸ್ಥೆಯು ಈ ದಿನಾಂಕದ ದಿನದ ಅಂತ್ಯದ ಪ್ರಕ್ರಿಯೆಯನ್ನು ಮುಗಿಸುವ ಮೊದಲು ಪೂರ್ಣ ಬಾಕಿಗಳನ್ನು ಸ್ವೀಕರಿಸದಿದ್ದರೆ, ಅವಧಿ ಮೀರಿದ ದಿನಾಂಕವು ಮಾರ್ಚ್ 7, 2024 ಆಗಿರುತ್ತದೆ. ಅದು ಅವಧಿ ಮೀರಿದ ನಂತರವೂ ಬಾಕಿಯಾಗಿಯೇ ಉಳಿದಿದ್ದರೆ, ಆಗ ಈ ಖಾತೆಯನ್ನು ಏಪ್ರಿಲ್ 6, 2024ರಂದು ಅಂದರೆ ನಿರಂತರವಾಗಿ ಅವಧಿ ಮೀರಿದ 30 ದಿನಗಳು ಪೂರ್ಣಗೊಂಡ ನಂತರ, ದಿನದ ಅಂತ್ಯದ ಪ್ರಕ್ರಿಯೆಯಲ್ಲಿ SMA- 1 ಎಂದು ಟ್ಯಾಗ್ ಮಾಡಲಾಗುತ್ತದೆ. ಅದರಂತೆ, ಆ ಖಾತೆಯನ್ನು ಗೆ SMA-1 ವರ್ಗೀಕರಣದ ದಿನಾಂಕವು ಏಪ್ರಿಲ್ 6, 2024ಆಗಿರುತ್ತದೆ. ಅದೇ ರೀತಿ, ಖಾತೆಯು ಮಿತಿಮೀರಿದ ಸ್ಥಿತಿಯಲ್ಲಿ ಮುಂದುವರಿದರೆ, 2024 ರ ಮೇ 6 ರಂದು ದಿನದ ಅಂತ್ಯದ ಪ್ರಕ್ರಿಯೆಯನ್ನು ನಡೆಸಿದಾಗ ಅದನ್ನು SMA- 2 ಎಂದು ಗುರುತಿಸಲಾಗುತ್ತದೆ. ಮತ್ತು ಅದು ಇನ್ನೂ ಮಿತಿಮೀರಿದ ಸ್ಥಿತಿಯಲ್ಲಿ ಮುಂದುವರಿದರೆ, 2024 ರ ಜೂನ್ 5 ರಂದು ದಿನದ ಅಂತ್ಯದ ಪ್ರಕ್ರಿಯೆಯನ್ನು ನಡೆಸಿದ ನಂತರ ಅದನ್ನು NPA (ನಿಷ್ಕ್ರಿಯ ಆಸ್ತಿ) ಎಂದು ವರ್ಗೀಕರಿಸಲಾಗುತ್ತದೆ.
20. ಟ್ರುಹೋಮ್ ಫೈನಾನ್ಸ್ ಲಿಮಿಟೆಡ್ ಗೆ ಮುಂಚಿತವಾಗಿ ತಿಳಿಸದೆಯೇ ಅಡಮಾನದ ಜೀವನಾಧಾರದ

ಸಮಯದಲ್ಲಿ ನೀವು ಅಡಮಾನದ ಆಸ್ತಿಯನ್ನು ಅಥವಾ ಅದರ ಯಾವುದೇ ಭಾಗವನ್ನು ಮಾರಾಟ ಮಾಡಲು, ಅಡವು ಇಡಲು, ಗುತ್ತಿಗೆ ನೀಡಲು, ಸರೆಂಡರ್ ಅಥವಾ ಪರಭಾರೆ ಮಾಡಲು ಅರ್ಹರಾಗಿರುವುದಿಲ್ಲ.

21. ಸಾಲದ ವಿತರಣೆಯು ಅಗತ್ಯ ದಾಖಲೆಗಳ ಸ್ವಾಧೀನ ಪಡಿಸುವುದು/ಸಲ್ಲಿಕೆಗೆ ಒಳಪಟ್ಟಿರುತ್ತದೆ, ಇದು ನಮ್ಮ ಒಟ್ಟಾರೆ ಮಂಜೂರಾತಿ ಸಂವಹನದ ಭಾಗವಾಗಿದೆ.
22. ಸಾಲದ ದಾಖಲೆಗಳ ಸ್ವಾಧೀನಪಡಿಸುವಿಕೆ ಮತ್ತು ಟ್ರುಹೋಮ್ ಫೈನಾನ್ಸ್ ಲಿಮಿಟೆಡ್ ಪರವಾಗಿ ಶುಲ್ಕವನ್ನು ರಚಿಸುವಲ್ಲಿ ಪಾವತಿಸಬೇಕಾದ ಎಲ್ಲಾ ಮುದ್ರಾಂಕ ಶುಲ್ಕ ಮತ್ತು ನೋಂದಣಿ ಶುಲ್ಕಗಳನ್ನು ಸಾಲಗಾರ(ರು) ಪಾವತಿಸಬೇಕು.
23. ಮೇಲೆ ಹೇಳಲಾದ ಎಲ್ಲಾ ಅಥವಾ ಯಾವುದೇ ಕರಾರುಗಳು ಮತ್ತು ಷರತ್ತುಗಳನ್ನು ಸೇರಿಸಲು, ಅಳಿಸಲು ಅಥವಾ ಮಾರ್ಪಡಿಸಲು ಟ್ರುಹೋಮ್ ಫೈನಾನ್ಸ್ ಲಿಮಿಟೆಡ್ ಅಧಿಕಾರವನ್ನು ಹೊಂದಿದೆ.

Truhome FINANCE
Formerly Shriram Housing Finance

24. ಪ್ರಕ್ರಿಯೆ ಶುಲ್ಕಗಳು ಮತ್ತು/ಅಥವಾ ಲಾಗಿನ್ ಶುಲ್ಕಗಳನ್ನು (ಆರಂಭಿಕ ಹಣ ಠೇವಣಿ) ಮರುಪಾವತಿಸಲಾಗುವುದಿಲ್ಲ.
25. ಸಾಲ ಸೌಲಭ್ಯದ ಮಂಜೂರಾತಿಯು ಟ್ರುಹೋಮ್ ಫೈನಾನ್ಸ್ ಲಿಮಿಟೆಡ್ ನ ಸ್ವಂತ ವಿವೇಚನೆಗೆ ಸಂಬಂಧಿಸಿದೆ.
26. ಈ ಮಂಜೂರಾತಿ ಪತ್ರವು ಮಂಜೂರಾದ ದಿನಾಂಕದಿಂದ ಈ ಮಂಜೂರಾತಿ ಪತ್ರದಲ್ಲಿ ಉಲ್ಲೇಖಿಸಲಾದ ಮಾನ್ಯತೆಯ ಅವಧಿಯವರೆಗೆ ಜಾರಿಯಲ್ಲಿರುತ್ತದೆ. ಆದರೆ, ಮರುಮೌಲ್ಯಮಾಪನವು ಸಾಲಗಾರ(ರು) ಅರ್ಜಿಯ ಆಧಾರದ ಮೇಲೆ ಟ್ರುಹೋಮ್ ಫೈನಾನ್ಸ್ ಲಿಮಿಟೆಡ್ ನ ಸ್ವಂತ ವಿವೇಚನೆಗೆ ಒಳಪಟ್ಟಿರುತ್ತದೆ.
27. ಸಾಲಗಾರ(ರು) ಮತ್ತು ಜಾಮೀನುದಾರರು (ಗಳು) ಅವರು ಒದಗಿಸಿದ ಮಾಹಿತಿ ಮತ್ತು ಡೇಟಾವನ್ನು ಟ್ರುಹೋಮ್ ಫೈನಾನ್ಸ್ ಲಿಮಿಟೆಡ್ ಗೆ ಬಹಿರಂಗಪಡಿಸಲು ಟ್ರುಹೋಮ್ ಫೈನಾನ್ಸ್ ಲಿಮಿಟೆಡ್ ಗೆ ಮತ್ತು ಕ್ರೆಡಿಟ್ ಮಾಹಿತಿ ಬ್ಯೂರೋ (ಇಂಡಿಯಾ) ಲಿ. ('CIBIL')ಗೆ ಕ್ರೆಡಿಟ್ ಸೌಲಭ್ಯ/ಗಳಿಗೆ ಸಂಬಂಧಿಸಿದಂತೆ, ಮಂಜೂರಾತಿ ಪತ್ರದ ಪ್ರತಿಗೆ ಸಹಿ ಮಾಡಿದ ನಂತರ ತಮ್ಮ ಸಮ್ಮತಿಯನ್ನು ವ್ಯಕ್ತಪಡಿಸಿದ್ದಾರೆ ಎಂದು ಪರಿಗಣಿಸಲಾಗುತ್ತದೆ. ಸಾಲಗಾರ(ರು) ಮತ್ತು ಜಾಮೀನುದಾರರು (ಗಳು) ಈ ಉದ್ದೇಶಕ್ಕಾಗಿ ಅಗತ್ಯವಿರುವ ಹೆಚ್ಚುವರಿ ದಾಖಲೆಗಳನ್ನು ಮತ್ತಷ್ಟು ಕಾರ್ಯಗತಗೊಳಿಸುತ್ತಾರೆ ಎಂದು ಸಮ್ಮತಿಸುತ್ತಾರೆ.
28. ಟ್ರುಹೋಮ್ ಫೈನಾನ್ಸ್ ಲಿಮಿಟೆಡ್ ನ ಲಾಭಕ್ಕಾಗಿ ಮತ್ತು/ಅಥವಾ ನಾನು/ನಾವು ಅಥವಾ ಜಾಮೀನುದಾರರು ರಚಿಸಿದ ಅಥವಾ ರಚಿಸಬಹುದಾದ ಭದ್ರತೆ/ಒಪ್ಪಂದ (ಚರ ಅಥವಾ ಸ್ಥಿರ) ಸಹಿತ ಅಥವಾ ರಹಿತವಾಗಿ ಯಾವುದೇ ಸೂಚನೆ ಅಥವಾ ಸಮ್ಮತಿಯಿಲ್ಲದೆ ಯಾವುದೇ ವ್ಯಕ್ತಿ ಅಥವಾ ತೃತೀಯ ಕಕ್ಷಿಗೆ ('ನಿಯೋಜಿತರು') ಸಾಲವನ್ನು ಮಂಜೂರು ಮಾಡಲು (ಅಥವಾ ಅದರ ಒಂದು ಭಾಗವನ್ನು) ಇಲ್ಲಿ ಸಮ್ಮತಿಸುವ ಮೂಲಕ ನಿಯೋಜಿಸುವ, ಅಥವಾ ಸೆಕ್ಯುರಿಟೈಸ್ ಮಾಡುವ ಅಥವಾ ಮಾಡದಿರುವ ಹಕ್ಕನ್ನು ಟ್ರುಹೋಮ್ ಫೈನಾನ್ಸ್ ಲಿಮಿಟೆಡ್ ಕಾಯ್ದಿರಿಸಿದೆ.
29. ಸೌಲಭ್ಯದ ಅಡಿಯಲ್ಲಿ ನೀಡಲಾದ ಹಣವನ್ನು ಬಂಡವಾಳ ಮಾರುಕಟ್ಟೆಯಲ್ಲಿ ಹೂಡಿಕೆಗೆ ಬಳಸುವಂತಿಲ್ಲ.
30. ಟ್ರುಹೋಮ್ ಫೈನಾನ್ಸ್ ಲಿಮಿಟೆಡ್ ನ ಸಂಪೂರ್ಣ ವಿವೇಚನೆಯಿಂದ ಕಾಲಕಾಲಕ್ಕೆ ನಿರ್ಧರಿಸಿದಂತೆ, ಮುಚ್ಚುವ ಪೂರ್ವ ಶುಲ್ಕಗಳನ್ನು ಟ್ರುಹೋಮ್ ಫೈನಾನ್ಸ್ ಲಿಮಿಟೆಡ್ ವಿಧಿಸುತ್ತದೆ.
31. ಗ್ರಾಹಕರಿಗೆ ಸೂಕ್ತ ಕಾರಣವನ್ನು ತಿಳಿಸುವ ಮೂಲಕ ಮಂಜೂರಾತಿ ಪತ್ರವನ್ನು ರದ್ದುಗೊಳಿಸುವ ಅಥವಾ ಮಾರ್ಪಡಿಸುವ ಹಕ್ಕನ್ನು ಟ್ರೂಹೋಮ್ ಫೈನಾನ್ಸ್ ಲಿಮಿಟೆಡ್ (Truhome Finance Limited) ಹೊಂದಿದೆ.
32. ಈ ಮಂಜೂರಾತಿ ಪತ್ರವನ್ನು ಸ್ವೀಕರಿಸುವ ಮೂಲಕ, ಟ್ರೂಹೋಮ್ ಫೈನಾನ್ಸ್ ಅಪಾಯದ ಮಟ್ಟವನ್ನು ನಿರ್ಧರಿಸಲು ಅಳವಡಿಸಿಕೊಂಡಿರುವ ವಿಧಾನ ಮತ್ತು ವಿವಿಧ ವರ್ಗಗಳ ಸಾಲಗಾರರಿಗೆ ವಿಭಿನ್ನ ಬಡ್ಡಿದರಗಳನ್ನು ವಿಧಿಸುವ ಹಿಂದಿನ ತರ್ಕವನ್ನು ನೀವು ಅರ್ಥಮಾಡಿಕೊಂಡಿದ್ದೀರಿ ಎಂದು ಖಚಿತಪಡಿಸುತ್ತೀರಿ. ಈ ಉದ್ದೇಶಕ್ಕಾಗಿ, ಟ್ರೂಹೋಮ್ ಫೈನಾನ್ಸ್ ನಿಧಿಗಳ ವೆಚ್ಚ, ಲಾಭಾಂಶ ಮತ್ತು ಆದಾಯಕ್ಕೆ ಅಪಾಯದ ಪ್ರೀಮಿಯಂ, ಉದ್ಯೋಗದ ವಿವರಗಳು, ಮರುಪಾವತಿ ಸಾಮರ್ಥ್ಯ, ಇತರ ಹಣಕಾಸು ಬದ್ಧತೆಗಳು, ಸಾಲದ ಇತಿಹಾಸ, ಸಾಲದಿಂದ ಮೌಲ್ಯದ ಅನುಪಾತ, ಭದ್ರತೆ/ಮೇಲಾಧಾರದ ಪ್ರಕಾರ, ಸಾಲದ ಉದ್ದೇಶ, ನಿಯಂತ್ರಕ ಬಂಡವಾಳ/ಅಗತ್ಯವಿರುವ ನಿಬಂಧನೆಗಳು ಇತ್ಯಾದಿ ಅಂಶಗಳನ್ನು ಸಹ ಪರಿಗಣಿಸುತ್ತದೆ. ಅದರಂತೆ, ಟ್ರೂಹೋಮ್ ಫೈನಾನ್ಸ್ ವಿವಿಧ ವರ್ಗಗಳಿಗೆ ವಿಭಿನ್ನ ಬಡ್ಡಿದರಗಳನ್ನು ವಿಧಿಸಬಹುದು.

ಅರ್ಜಿದಾರರು/ಸಹ-ಅರ್ಜಿದಾರರು (ಯಾರಾದರೂ ಇದ್ದರೆ) ದಯವಿಟ್ಟು ಈ ಮಂಜೂರಾತಿ ಪತ್ರದ ಎಲ್ಲಾ ಪುಟಗಳಲ್ಲಿ ಸಹಿ ಮಾಡಬೇಕು ಮತ್ತು ಮೇಲೆ ತಿಳಿಸಿದ ಕರಾರುಗಳು ಮತ್ತು ಷರತ್ತುಗಳಿಗೆ ಸಮ್ಮತಿಸಿದರೆ ಈ ಪತ್ರದ ನಕಲು ಪ್ರತಿಯನ್ನು ತಲುಪಿಸಬೇಕು.

ನಾವು ಪರಸ್ಪರ ಲಾಭದಾಯಕ ಮತ್ತು ದೀರ್ಘಾವಧಿಯ ಸಂಬಂಧದ ನಿರೀಕ್ಷೆಯಲ್ಲಿದ್ದೇವೆ. ಧನ್ಯವಾದಗಳೊಂದಿಗೆ,
ಟ್ರುಹೋಮ್ ಫೈನಾನ್ಸ್ ಲಿಮಿಟೆಡ್

ಅಧಿಕೃತ
ಸಹಿದಾರರು

ಸ್ವೀಕರಿಸಲಾಗಿದೆ

ದಿನಾಂಕ:

ಅರ್ಜಿದಾರರು / ಸಹ-ಅರ್ಜಿದಾರರು /

Formerly
Shriram Housing Finance

ಜಾಮೀನು
ದಾರರು
(ಯಾರಾದ
ರೂ
ಇದ್ದರೆ)
ದಿನಾಂಕ: